S. N. Janardhana P. Prabhu

ಶ್ರೀಃ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

Dr. P. Ganesha Bhat,
Regd. Medical Practitioner,
"VIJAYA CLINIC"
KAVU. (PUTTUR Tq) S. K.

★

ಯಕ್ಷಗಾನ

ಇಂದ್ರಕೀಲಕ

★

ಎರಡನೆಯ ಅಚ್ಚು: ೧೯೫೧

ಶ್ರೀಕೃಷ್ಣಮುದ್ರಣಾಲಯ ಉಡುಪಿ

ಐದಾಣೆ

Scanned by CamScanner

ಅಚ್ಚುಗಾರರು:
ಶ್ರೀಕೃಷ್ಣ ಮುದ್ರಣಾಲಯ
ಉಡುಪಿ

ಎಲ್ಲ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ

ಪ್ರಕಾಶಕರು:
ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ ಉಡುಪಿ

ಶ್ರೀಃ

॥ ಶ್ರೀಶಂಕರಾಯ ನಮಃ ॥

ಶ್ರೀಮನ್ಮಹಾಭಾರತದೊಳಗಣ

ಯಕ್ಷಗಾನ ಇಂದ್ರಕೀಲಕ

ಶಾರ್ದೂಲವಿಕ್ರೀಡಿತಂ

ಶ್ರೀಗಂಗಾಧರನಂಬುಜಾಪ್ತಶತಭಾಸಂ ತ್ರೈಜಗತ್ಪಾಲಕಂ
ನಾಗಾರೂಢಮುಖಾಮರೌಘವಿನುತಂ ಕೈಲಾಸವಾಸಂ ಹರಂ ।
ನಾಗಾರಾತಿವರೂಥಮಿತ್ರಮುಭವಂ ನಾನಾಸುವಿದ್ಯಪ್ರದಂ
ವಾಗೀಶಾಖ್ಯಪುರೇಶನೀವುದೆಮಗಂ ಸದ್ಭಕ್ತಿಸಂದೋಹಮಂ ॥

ವಾರ್ಧಿಕ

ಪುರಹರನ ರಾಣಿಯಂ ಕಾಳಾಹಿವೇಣಿಯಂ । ಶರಜಾತಪಾಣಿಯಂ ಕಳಕೀರವಾಣಿಯಂ । ಹರಿಣಾಂಕವದನೆಯಂ ಮುನಿಹೃದಯಸದನೆಯಂ ಕುಂದಕುಡ್ಮಲರದನೆಯಂ ॥ ದುರುಳಖಳನಾಶೆಯಂ ನಿರತ ಸಂತೋಷೆಯಂ । ಶರಣಜನಪೋಷೆಯಂ ನವರತ್ನಭೂಷೆಯಂ । ತರಣಿಸಂಕಾಶೆಯಂ ಕುಟಜಾದ್ರಿವಾಸೆಯಂ ಸ್ಮರಿಸಿ ಪಡೆವೆಂ ಮತಿಯನು ॥ ೧ ॥

ಕಂದ

ಹರಪುತ್ರಂ ಗಜವಕ್ತ್ರಂ । ಹರಿಮಿತ್ರಂ ವಾಸವಾದಿತ್ರಿದಶಸ್ತೋತ್ರಂ ॥
ಸ್ಥಿರತೋಷಂ ಉರಗಭೂಷಂ । ಕರುಣದೊಳೆಮಗೀಗೆ ಮತಿಯನು ವಿಘ್ನೇಶಂ ॥

ವಾರ್ಧಿಕ

ಕಮಲದಳನೇತ್ರನಂ ನೀಲಾಭಗಾತ್ರನಂ । ಸುಮನಸೋದ್ಧಾರನಂ ಕರುಣರಸಪೂರನಂ । ತಮದೈತ್ಯನಾಶನಂ ಕೌಸ್ತುಭವಿಭೂಷನಂ ಮಾಕಾಂತ

Scanned by CamScanner

ನಂ ಶಾಂತನಂ ॥ ದ್ಯುಮಣಿಶತತೇಜನಂ ಸ್ಮಿತಮುಖಸರೋಜನಂ । ನಮಿತ ಜನಪಾಲನಂ ವರಪೀತಚೇಲನಂ । ಸುಮಶರನ ತಾತನಂ ಶಂಕರನ ಪ್ರೀತನಂ ನೆನೆದುಸಿರ್ವೆಂ ಕೃತಿಯನು ॥ ೧ ॥

ಭಾಮಿನಿ

ಶ್ರೀಸತಿಗೆ ತಲೆವಾಗುತಂಭೋ । ಜಾಸನನ ಸಂಸ್ತುತಿಸಿ ಘನ ಸಂ । ತೋಷದಿಂ ಶಾರದೆಗೆ ವಂದಿಸಿ ಭಕ್ತಿಯಿಂದೊಲಿದು ॥ ವಾಸವಾದ್ಯರಿಗೆರಗಿ ವೇದ । ವ್ಯಾಸಮುನಿಪೋತ್ತಮರ ಕೋಮಲ । ಭಾಸುರಾಂಘ್ರಿಗೆ ಮಣಿದು ಪೇಳುವೆನೀ ಪ್ರಬಂಧವನು ॥ ೧ ॥

ದ್ವಿಪದಿ

ಶುಕಮುನಿಪನನು ಭಜಿಸಿ ಸುಜನರಿಗೆ ನಮಿಸಿ । ಸಕಲ ಕವಿಗಳ ನೆನೆದು ಭಕ್ತಿರಸವೆರಸಿ ॥೧॥ ಭಾರತಮಹಾಕಥನದೊಳಗೆ ಫಲುಗುಣನು । ಮಾರಾರಿಯೊಳು ಸೆಣಸಿ ಶರವ ಪಡೆದುದನು ॥ ೨ ॥ ಉತ್ತಮವಿದೆಂದು ವರ ಯಕ್ಷಗಾನದಲಿ । ಬಿತ್ತರಿಪೆನಜಪುರದ ಹರನ ಕರುಣದಲಿ ॥ ೩ ॥ ಬಾಲಭಾಷಿತವೆಂದು ನಿಂದಿಸದೆ ಧರೆಯ । ಮೇಲುಳ್ಳ ಸಜ್ಜನರು ಕೇಳ್ವುದೀ ಕಥೆಯ ॥ ೪ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಸೋಮಕುಲಸಂಜಾತನಾಗಿಹ । ಭೂಮಿಪತಿ ಜನಮೇಜಯಂಗಾ । ಪ್ರೇಮಿ ವೈಶಂಪಾಯಮುನಿಪತಿ । ಸಾಮದಿಂದ ॥ ೧ ॥ ವರ ಮಹಾಭಾರತ ಪುರಾಣವ । ನರುಹುತಿರಲೊಂದಿವಸ ಮುನಿಪತಿ । ಗೆರಗಿ ಪುತ್ತಿಂತೆಂದನವನಿಪ । ಕರವ ಮುಗಿದು ॥ ೨ ॥ ಪರಮ ಋಷಿಕುಲತಿಲಕ ಕೇಳ್ಕೆ । ಹರನೊಡನೆ ನರನೆಂತು ಕಾದಿದ । ಶರವ ಸಂಪಾದಿಸಿದನೆಂತದ । ನೊರೆವುದಯ್ಯ ॥ ೩ ॥ ಇಂತು ಪೇಳ್ದುದ ಕೇಳ್ದು ಮುನಿಪತಿ । ದಂತಿಪುರವರನನ್ನು ತಳ್ಕಿಸಿ । ಕಂತುಜನಕನ ನೆನೆದುಸಿರ್ದನು । ಸಂತಸದಲಿ ॥ ೪ ॥

ವಾರ್ಧಿಕ

ಅವನಿಪತಿ ಕೇಳ್ದಿಲ್ಲಿ ಪಿಂದಾದ ಕಥನಮಂ । ವಿವರಿಸುವೆನಿನ್ನು ಮೇಲಣ ಕಥೆಯನುಂ ಯಮಜ । ಪವನಸುತ ಪಾರ್ಥ ನಕುಲಾಂಕ ಸಹದೇವರಯ್ವರು ಮಾತೆಯಂ ವಿದುರನ ॥ ಭವನದೊಳ್ ನಿಲಿಸಿ ದ್ರೌಪದಿಯನೊಡಗೊಂಡು ಭೂ । ದಿವಿಜರ ಸಮೂಹದಿಂ ವಾಸಿಯಿಂ ಧರೆಯನುಳಿ । ದಿವರು ಧೌಮ್ಯನ ಪುರೋಹಿತತನದಿ ದುಗುಡದಿಂ ಪುರವನುಂ ಪೊರಮಟ್ಟರು ॥ ೧ ॥

ಭಾಮಿನಿ

ಧರಣಿಪತಿ ಕೇಳಾ ಯುಧಿಷ್ಠಿರ । ನರಪತಿಯ ಬೆಂಬಳಿಯಲಯ್ದಿತು । ಮರುಗಿ ಭೀಷ್ಮ ದ್ರೋಣ ಮೊದಲಾದವರು ದುಗುಡದಲಿ ॥ ಅರಸನವದಿರ ನಿಲಿಸಿ ಗಂಗಾ । ವರನದಿಯ ದಾಟುತ್ತವುತ್ತರ । ಪರಮ ಪುಣ್ಯಸ್ಥಾನದಲಿ ವಿರಚಿಸಿದನಾಶ್ರಮವ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಬಿಡದೆ ಬರುತಿಹ ರಾಜಪುತ್ರರ । ಗಡಣವನು ಮನ್ನಣೆಯ ಭಟರನು । ಪೊಡವಿಯಮರಸಮೂಹವನು ಕಂ । ಡೊಡನೆ ಯಮಜ ॥ ೧ ॥ ಬೆರಳ ಮೂಗಿನೊಳಿಟ್ಟು ಚಿಂತಿಸಿ । ಮರುಗಿ ದುಷ್ಕೃತವನ್ನು ಬಯ್ಯುತ । ಬೆರಗುವಟ್ಟಾ ಭೀಮಸೇನನ । ಕರೆದುಸಿರ್ದ ॥ ೨ ॥ ಧರಣಿ ಕೌರವಗಾಯ್ತು ವಿಪಿನಾಂ । ತರನಿವಾಸಿಗಳಾದೆವೈ ಭೂ । ಸುರರು ಬರಲೇಕಿವರು ಹೇಳೆಂ । ದರಸ ನುಡಿದ ॥ ೩ ॥

ಕಂದ

ಭೂರಮಣಂ ಪೇಳಿಡುದಂ । ಮಾರುತನಾತ್ಮಜ ಲಾಲಿಸಿ ಮನಮರುಗುತ್ತಂ ॥ ಧಾರಿಣಿಸುರರೊಳ್ ತಾ ಗಂ । ಭೀರದೊಳಿಂತೆಂದನೆಲ್ಲರುಂ ಕೇಳ್ವೋಲುಂ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ನಿಲ್ಲಿರೈ ದ್ವಿಜರು ನೇಮವ ಕೊಳ್ಳಿ ಭೂಪನೊ । ಳೆಲ್ಲ ಪಿಂತಿರುಗಿ ಯೋಚಿಸದೆ ॥ ಸಲ್ಲದೀ ವನವಾಸ ನಿಮಗೆನೆ ಕೇಳ್ದವ । ರೆಲ್ಲರೊಟ್ಟಾಗಿ ಹೇಳಿದರು ॥ ೧ ॥ ಏಕೆಮ್ಮನೂರಿಗಟ್ಟುವಿರಿ ಸಜ್ಜನಸಂಗ । ಬೇಕೆಂಬ ಮನದಿ ಬಂದಿಹೆವು ॥ ಆ ಕೌರವನ ಕೂಡೆ ರಾಜ್ಯದೊಳಿಹುದರಿಂ । ದೀ ಕಾಡೊಳಿಹೆವು ಸೌಖ್ಯದಲಿ ॥ ೨ ॥ ನೀವೆ ಪಾಲಕರಲ್ಲದೆಮಗೆ ಮತ್ತಿನ್ನೊರ್ವ । ಭೂವರನನು ಕಾಂಬುದುಂಟೆ ॥ ಆವ ಘೋರಾರಣ್ಯಕಯ್ದಿದರ್ಬಹೆವೆಮ್ಮ । ಕಾವ ಕರ್ತೃಗಳು ನೀವಯ್ಸೆ ॥ ೩ ॥

ಭಾಮಿನಿ

ಎನಲು ಧರ್ಮಜ ಕೇಳ್ದು ಚಿಂತಾ । ವನಧಿಯಲಿ ಮುಳುಗುತ್ತಲೀಕಾ । ನನನಿವಾಸದೊಳೆಂತು ರಕ್ಷಿಪೆನೀ ಮಹೋತ್ತಮರ ॥ ದನುಜಹರನೇ ಬಲ್ಲನಿಳೆಯೊಳು । ಜನಪರಾರೆನ್ನಂತೆ ಪಾಪಿಗ । ಳೆನುತ ದುಃಖಿಸೆ ಧೌಮ್ಯನಿಂತೆಂದನು ಯುಧಿಷ್ಠಿರಗೆ ॥ ೧ ॥

Scanned by CamScanner

ರಾಗ ಮಾರವಿ ಏಕತಾಳ

ಜನಪಾಲಾಗ್ರಣಿ ಬಿಡು ಬಿಡು ನಿನ್ನಯ । ಮನಸಿನ ದುಗುಡವನು ॥ ಇನಿತೀ ಕೆಲಸಕೆ ಯೋಚನೆಯೇಕೆಲೊ । ದಿನಮಣಿಯನು ಭಜಿಸು ॥ ೧ ॥ ಬಗೆಬಗೆ ಷಡುರಸದನ್ನವು ದೊರೆವುದು । ಸುಗುಣ ನೀ ಕೇಳೆನಲು ॥ ಜಗತೀ ವಲ್ಲಭ ಧೌಮ್ಯನ ಮಾತಿಗೆ । ಮಿಗೆ ಸಂತೋಷದೊಳು ॥ ೨ ॥ ಬಂದಾ ಗಂಗಾನದಿಯೊಳು ಸ್ನಾನವ । ನಂದು ರಚಿಸಿ ಶುಚಿಯಿಂದ ॥ ನಿಂದಾ ತೀರದಿ ರವಿಯ ನಿರೀಕ್ಷಿಸು । ತಂದು ಸಮಾಧಿಯಲಿ ॥ ೩ ॥ ತಪದಿಂದಿರಲಾ ಕ್ಷಣದೊಳು ಮೆಚ್ಚಿಯೆ । ತಪನನು ನಡೆತಂದ ॥ ಉಪಚರಿಸಲು ಕಣ್ದೆರೆದೀಕ್ಷಿಸಿ ಭೂ । ಮಿಪ ಸಂಸ್ತುತಿಗೆಯ್ದ ॥ ೪ ॥ ಧರಣಿಪ ಕೇಳಕ್ಷಯಪಾತ್ರವ ನಾ । ಕರುಣದಿ ನಿನಗೀವೆ ॥ ತರುಣೀಮಣಿ ದ್ರೌಪದಿ ಬಡಿಸಲಿ ಭೂ । ಸುರರಿಗುಳಿದ ಜನಕೆ ॥ ೫ ॥ ಅದರಿಂ ಮೇಲಯ್ವರು ನೀವುಂಬುದು । ಸುದತಿಯು ಮತ್ತಿಣಲಿ ॥ ವಿಧವಿಧದನ್ನವು ದಿನದಿನಕಾಹುದು । ಬೆದರದಿರೆನುತಿತ್ತ ॥ ೬ ॥

ವಾರ್ಧಿಕ

ಧರಣಿಪತಿಯಾಲಿಸ್ಯೆ ಕನಕಪಾತ್ರೆಯನಿತ್ತು । ಮರವಿಂದಸಖನಯ್ದಲಿತ್ತಲುಂ ಪಾಂಡವರ್ । ಹರುಷದಿಂದಿರಲಿತ್ತಲುಂ ಹಸ್ತಿನಾವತಿಗೆ ಮೈತ್ರೇಯ ಮುನಿಪನಯ್ದಿ ॥ ಕುರುಪತಿಯೊಡನೆ ಪಾಂಡುಸುತರನಂ ಮರಳಿ ನೀ । ಕರೆಸೆನಲ್ ಖತಿಯಿಂದವಂ ತೊಡೆಯನುಂ ತಟ್ಟೆ । ಲುರುಕೋಪದಿಂ ತೊಡೆಯೊಳಂತ್ಯಮಾಗಲಿ ನಿನಗೆನುತ ಮುನಿ ಶಪಿಸಿ ನಡೆದನು ॥ ೧ ॥

ರಾಗ ಭೈರವಿ ಝಂಪೆತಾಳ

ಇತ್ತ ಪಾಂಡವರು ವಿ । ಪ್ರೋತ್ತಮರ ಕೂಡಿಕೊಂ । ಡತ್ಯಂತ ಹರುಷದಿಂ । ದಾಪ್ತಜನಸಹಿತ ॥ ೧ ॥ ಘನಪರಾಕ್ರಮದಿ ಕಾ । ನನಕೆ ಬರೆ ಮೂರನೆಯ । ದಿನಕೆ ಕಾಮ್ಯಕವೆಂಬ । ವನಸಮೀಪದೊಳು ॥ ೧ ॥ ತೋರುತಿರಲ್ಲಿ ಕಿ । ರ್ಮೀರನೆಂಬವನೊರ್ವ । ವೀರ ಬಕನಣ್ಣನವ । ನಾರುಭಟೆಯಿಂದ ॥ ೩ ॥ ತಡೆದಿವರ ಪಾಳೆಯವ । ನೊಡನೆ ಹೂಂಕರಿಸಿ ಕ । ಣ್ಗೆಡಿಗೆದರಿ ನಿಂದನಾ । ಧಡಿಗ ದಾನವನು ॥ ೪ ॥

ಕಂದ

ನಿಂದಾ ದಾನವನಂ ಕಂ । ಡಂದಾ ವಿಪ್ರೌಘಮಯ್ದೆ ಬೆದರುತ್ತಾಗಂ ॥ ಬಂದಾ ಧೌಮ್ಯಂ ತಾ ದಿ । ಗ್ಬಂಧನವಂ ಗೆಯ್ದು ಪೇಳ್ದ ಭೂಸುರರರ್ಗಂ ॥೧॥

ರಾಗ ಸೌರಾಷ್ಟ್ರ. ತ್ರಿವುಡೆತಾಳ

ಯಾಕೆ ಬೆದರುವಿರ್ದ್ವಿಜೋತ್ತಮ । ರೀ ಕುಠಾರನ ಗೆಲುವಡೆಮ್ಮಯ । ಸಾಕಿದವನಿಪನೆಂದ ಧೌಮ್ಯ ವಿ । ವೇಕದಿಂದ ॥ ೧ ॥ ಅನಿತರೊಳಗರ್ಜುನನು ತನ್ನಯ । ಧನುವ ಝೇವಡೆಗಯ್ದುತಿರೆ ಕಂ । ಡನಿಲಸುತನಡಹಾಯ್ದು ತಿಂದನು । ದನುಜನೊಡನೆ ॥ ೨ ॥ ಖೂಳ ಖಳ ಕೇಳೆಲೆವೊ ಬಲುಹನು । ಬಾಲವೃದ್ಧರ ಮೇಲೆ ತೋರ್ಪೆಯ । ಕಾಲನವರಿಂಗೀವೆ ನಿನ್ನನು । ಸೀಳಿ ಭರದಿ ॥ ೩ ॥ ಎಲವೊ ಮನುಜಾಧಮನೆ ನಿನ್ನಯ । ತಲೆಯನರಿದೀ ಜನ ಸಮೂಹವ । ನಲಸದೀಕ್ಷಣ ತಿಂಬೆನೊಂದರೆ । ಘಳಿಗೆಯೊಳಗೆ ॥ ೪ ॥ ಅನುಜನಾಗಿಹ ಬಕನ ನಿನ್ನಯ । ತನುವ ಸೀಳಿದು ತೆಗೆವೆನೀಕ್ಷಣ । ವೆನಲು ಗಹಗಹಿಸುತ್ತ ಮಾರುತ । ತನಯ ನುಡಿದ ॥ ೫ ॥ ದನುಜ ಕೇಳ್ ನಿನ್ನನುಜ ತನ್ನಯ । ತನುವಿನೊಳಗಿಲ್ಲಾತ ಯಮಪ । ಟ್ಟಣವ ತೋರ್ಪೆನು ಕ್ಷಣದಿ ಯೆನ್ನುತ । ಘನತೆಯಿಂದ ॥ ೬ ॥

ರಾಗ ಶಂಕರಾಭರಣ ಮಟ್ಟೆತಾಳ

ಎನಲು ದೈತ್ಯ ರೋಷದಿಂದ ಮರನ ಮುರಿದನು । ಕನಲಿ ಗರ್ಜಿಸುತ್ತ ಹೊಯ್ದನನಿಲಸುತನನು ॥ ಮನದಿ ರೋಷವೆತ್ತು ಮಾರುತಕುಮಾರನು । ದನುಜನನ್ನು ಹೊಕ್ಕು ತಿವಿದನತಿಬಲಾಢ್ಯನು ॥ ೧ ॥ ತಿವಿದ ಹತಿಗೆ ಧರೆಗೆ ಬೀಳುತೆದ್ದು ಭರದಲಿ । ದಿವಿಜವೈರಿ ಭುಜವನೊದರಿಸುತ್ತ ಖತಿಯಲಿ ॥ ಅವನಿಯೊಡೆವ ತೆರದಿ ಕೂಗೆ ಕಂಡು ವಿಪ್ರರು । ಪವನತನುಜ ಬೇಗಲಿವನ ತೀರ್ಚೆಯೆಂದರು ॥ ೨ ॥ ಬುಧರು ಬೆದರುವುದನು ಕಂಡು ಭೀಮಸೇನನು । ಗದೆಯ ತೂಗುತಭಯವಿತ್ತು ಮತ್ತೆ ಖಳನನು ॥ ಇದಿರು ನಿಲ್ಲು ನಿಲ್ಲೆನುತ್ತ ಭಾರಿ ಗದೆಯೊಳು । ತ್ರಿದಶವೈರಿಗೆರಗೆ ಬಿದ್ದನವನು ಧರೆಯೊಳು ॥ ೩ ॥

ಭಾಮಿನಿ

ಗದೆಯ ಹೊಯ್ಲಲಿ ಕೆಡೆದವನ ಕಂ । ಡಧಿಕ ಹರುಷದಿ ಭೀಮನೆಳೆದಾ । ಡಿದನು ಹುಡಿಯಲಿ ಹೊಳಿದನು ಕಿರ್ಮೀರದಾನವನ ॥ ಬುಧರು ಕಾಣುತ ಖಳನ ಶವವನು । ಮುದದಿ ಮರುತಾತ್ಮಜನನೆಲ್ಲರು । ವಿಧವಿಧದಿ ಹೊಗಳಿದರು ನಮ್ಮನು ಕಾಯ್ದೆ ನೀನೆನುತ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಮುಂದಿನ್ನು ಭಯವಿಲ್ಲ ನಮಗೆ ಈ ವನದೊಳ । ಗೆಂದು ಧರ್ಮಜ ನಗುತ ॥ ಬಂದೆಲ್ಲರೊಡನೆ ಕಾಮ್ಯಕವೆಂಬ ವನದೊಳ । ಗಂದವಾಗಿಹ

ಸ್ಥಳದಿ ॥ ೧ ॥ ಎಲೆಮನೆಗಳ ರಚಿಸಿಯೆ ಪಾಂಡುತನುಜರು । ಜಲಜಮಿತ್ರನು ದಯದಿ ॥ ಒಲಿದಿತ್ತಕ್ಷಯಪಾತ್ರದಿಂದಲಿ ಭೂಸುರ । ಕುಲಕೆ ತೃಪ್ತಿಯ ಪಡಿಸಿ ॥ ೨ ॥ ದಿನದಿನಕೀಪರಿಯಿಂದಿರುತಿರ್ದರು । ಮನೆಯಿಂದಧಿಕವೆನಿಸಿ ॥ ವನವಾಸವಾಯ್ತೆಂಬ ವ್ಯಾಕುಲವಿಲ್ಲದೆ । ವನಜನಾಭನ ದಯದಿ ॥ ೩ ॥

ವಾರ್ಧಿಕ

ಇಂತು ಆರಣ್ಯವಾಸದಿ ಪಾಂಡುನಂದನರು । ಕಂತುಪಿತನಂ ಮನದಿ ನೆನೆವುತ್ತ ವಿಪ್ರರಂ । ಸಂತುಷ್ಟಿಬಡಿಸುತಿರೆ ವಹಿಲದಿಂ ಪರ್ಬಿತೀ ವಾರ್ತೆ ದ್ವಾರಾವತಿಯೊಳು ॥ ದಂತಿಪುರವರನನುಜರೊಡಗೂಡಿ ವನವಾಸ । ಮಂ ತಳೆದನೆಂದು ಕೇಳ್ದಲ್ಲಿರುವ ಹರಿಕಾರ । ರಂ ತಳುವದೋಳ್ ಬಂದು ಹರಿಯ ಸಿರಿಚರಣಮಂ ಕಂಡೆರಗುತಿಂತೆಂದರು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಲಾಲಿಸು ಜೀಯ ಪಾಂಡವರಿಗೆ ಕಾಂತಾರ । ದಾಲಯವಾಯಿತಂತೆ ॥ ಖೂಳ ಕೌರವ ಕಪಟದ ಜೂಜೊಳವದಿರ । ಸೋಲಿಸಿ ಗೆಲಿದನಂತೆ ॥ ೧ ॥ ಧಾರಿಣಿಯನು ಬಿಟ್ಟು ನಾರಸೀರೆಯನುಟ್ಟು । ನಾರಿ ದ್ರೌಪದಿ ಸಹಿತ ॥ ಆರಣ್ಯ ಕಯ್ದಿದರ್ ಪಾಂಡುನಂದನರೆಂಬ । ವಾರತೆ ಕೇಳ್ದೆವಿಂದು ॥ ೨ ॥ ಎನಲಾ ಮಾತನು ಕೇಳಿ ಮನದಿ ದುಃಖಿಸುತಲೆ । ವನಜಾಕ್ಷ ಚಿಂತಿಸುತ ॥ ಘನ ಕ್ಲೇಶದಲಿ ಮರುಗುತ ತನ್ನೊಳೆಂದನು । ಮನುಜರಂದದಲಿ ತಾನು ॥ ೩ ॥ ಶಿವ ಶಿವ ಧರ್ಮನಿಷ್ಠರಿಗೆ ಕಾಂತಾರದ । ಭವನವು ದೊರೆವುದಾಯ್ತೆ ॥ ನವೆ ದಾರು ಪಿರಿದಾಗಿ ಪಗೆಯಾದ ಪಾಪಿ ಕೌ । ರವನಿಂದ ಸನ್ಮಾರ್ಗರು ॥ ೪ ॥ ಹಲವು ಶಾಸ್ತ್ರವ ಬಲ್ಲನಾ ಧರ್ಮಸುತನೇಕೆ । ಖಳರೊಳಗಾಡಿದನೊ ॥ ಹಳುವದೊಳೆಂತವನಿಪರಿಹರೆನ್ನುತ । ನಳಿನಾಕ್ಷ ಮರುಗಿದನು ॥ ೫ ॥

ಭಾಮಿನಿ

ಮರುಗಿ ಬಿಸುಸುಯ್ದುತ್ತಲಾ ಭ । ಕ್ತರನು ಕಾಂಬರ್ತಿಯಲಿ ಸೈನಿಕ । ವೆರಸಿ ಪೊರಟನು ಶರಣರೇನ್ ಘನವೋ ಸನಾಥನಿಗೆ ॥ ಅರಸ ಕೇಳಂದಣ ಗಳಲಿ ಬಂ । ದರು ಸತೀನಿಕುರಂಬ ವಾದ್ಯದ । ಭರಿತ ಘೋಷದೊಳಾಕ್ಷಣವೆ ನಡೆತಂದನಸುರಾರಿ ॥ ೧ ॥

ರಾಗ ಮಧ್ಯಮಾವತಿ ತ್ರಿವುಡೆತಾಳ

ಭೂರಿವೈಭವದಿಂದ ಯಾದವ । ವೀರರೊಡನಯ್ತರಲು ಘನ ಗಂ । ಭೀರ ಭೇರಿಯ ರಾವದಿಂ ಶ್ರೀ । ವಾರಸಹ ಶತಶೂರತೇಜದಿ । ವೀರಪಾಂಡವರಿರ್ಪ

ವನವನು । ಸಾರಬೇಕೆಂದೆಂಬ ತವಕದಿ । ಚಾರುಮೌಕ್ತಿಕಹಾರ ದೈತ್ಯವಿ । ದಾರ ಶರಣಾಗತರನೀಕ್ಷಿಪ । ತೋಷದಿಂದ । ಬಂದ ವಿ । ಲಾಸದಿಂದ ॥ ೧ ॥

ವಾರ್ಧಿಕ

ಅರಸ ಕೇಳಿತ್ತಲಚ್ಯುತನಿಂತು ಬರುತಿರಲು । ಧರೆಗಧಿಪರೊಳ್ ಪಾಂಡು ನಂದನರ್ಗಾಪ್ತರಾ । ದರಸುಗಳು ದ್ರುಪದ ಕುಂತೀಭೋಜ ಮುಖ್ಯರೀ ವಾರ್ತೆಯಂ ಕೇಳ್ದು ಮರುಗಿ ॥ ಭರದಿಂದ ಪಾಂಡುಸುತರಂ ನೋಳ್ಪ ತವ ಕದಿಂ । ದಿರದೆ ಕಾಮ್ಯಕವನಕೆ ಬರಲವರನುಪಚರಿಸಿ । ಹರಿಯನುಂ ನೋಳ್ಪರ್ತಿಯಿಂ ಧರ್ಮಜಂ ಸೋದರರ್ವೆರಸಿ ಪೊರಮಟ್ಟನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಈ ತೆರದಿ ಧರ್ಮಜನು ವಿಪ್ರ । ವ್ರಾತ ಸಹಿತಯ್ತಂದು ಕಂಡಬು । ಜಾತನಯನನಿಗೆರಗಿದನು ಸಹ । ಜಾತರೊಡನೆ ॥ ೧ ॥ ಸೋರುವಶ್ರುಗಳಿಂದ ನಮಿಸುವ । ವೀರರನು ಕಂಡಸುರಮರ್ದನ । ಬೇರೆ ಬೇರೊಲಿದೆತ್ತಿದನು ಕ । ಣ್ಣೀರನೊರೆಸಿ ॥ ೨ ॥ ಭಾವಮೈದುನರುಗಳನಿಂತಾ । ಶ್ರೀವರನು ಪಿಡಿದೆತ್ತಿ ತಳ್ಕಿಸೆ । ಭಾವೆಯರ ಕುಲದೇವಿ ಬಂದಳು । ದೇವನೆಡೆಗೆ ॥ ೩ ॥

ಭಾಮಿನಿ

ಕೇಳು ಧರಣಿಪ ದ್ರುಪದನಂದನೆ । ನೀಲಮೇಘನಿಭಾಂಗನಂಘ್ರಿಯ । ಮೇಲೆ ಬಿದ್ದೊರಲಿದಳು ಘನಸಂತಾಪಭಾರದಲಿ ॥ ಖೂಳ ಕೌರವನೆನ್ನ ಮಾನವ । ಕೋಳುಗೊಂಬಾ ಸಮಯದಲಿ ಶ್ರೀ । ಲೋಲ ಸಲಹೆನೆ ಪಾಲಿಸಿದ ಚಿನ್ಮಯನೆ ಪೊರೆಯೆನುತ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಎಂದು ಪಾದದಿ ಪೊರಳುವ ದ್ರುಪದಜೆಯ ಗೋ । ವಿಂದನೀಕ್ಷಿಸಿ ಮುದದಿ ॥ ಚಂದಿರಾನನೆಯ ಶಿರವ ಪಿಡಿದೆತ್ತುತ । ಲೆಂದನು ಪರಿತೋಷದಿ ॥ ॥ ೧ ॥ ತಾಯೆ ಕೇಳೌ ತಂಗಿ ಬಳಲಿದೆ ನೀ ಪರಿ । ದಾಯಾಸದೊಳು ಸಿಲುಕಿ ॥ ಬಾಯಾರಬೇಡವೆಂದೆನೆ ಶೋಕ ಹೆಚ್ಚಿತು । ತೋಯಜದಳನೇತ್ರೆಗೆ ॥ ೨ ॥ ತರುಣಿ ಬಿಕ್ಕೀಬಿಕ್ಕಿ ಬಿರಿದಳುತಿರೆ ಕಂಡು । ಪರಮಪುರುಷ ಮನದಿ ॥ ಮರುಗುತ್ತವಳ ಕಂಬನಿಯ ಸೆರಗಿಂದ ತಾ । ನೊರಸಿ ಪೇಳ್ದನು ಮುದದಿ ॥ ೩ ॥ ಮುಡಿಯ ಕಟ್ಟಬಲೆ ದುಃಖಿಸಬೇಡ ಕೌರವ । ಗಡಣ ಬೆಂದುರಿವುದಿನ್ನು ॥ ಸುಡುವುದು ನಿನ್ನೊಡಲಗ್ನಿಯು ಖಳಕುಲ । ದಡವಿಯನೆನಲೆಂದಳು ॥ ೪ ॥

Scanned by CamScanner

ರಾಗ ನೀಲಾಂಬರಿ ರೂಪಕತಾಳೆ

ತುರುಬ ಕಟ್ಟುವ ರೀತಿ । ಯರಿಯೆಯ ನಾ ನಿನ್ನೊ । ಳರುಹುವು ದೇನು ಚಿನ್ಮಯನೆ ॥ ಕುರುರಾಯನನುಜನ । ಉರದ ರಕ್ತದೊಳದ್ದಿ । ಮರಳಿ ಕಟ್ಟುವ ಭಾಷೆ ತನಗೆ ॥ ೧ ॥ ಅರಿತೆ ನಾ ತಂಗಿ ನೀ । ಮರುಗಲೇಕಿದಕಿನ್ನು । ಕುರಿಗಳೇಂ ಘನವೆ ನಿನ್ನವರ್ಗೆ ॥ ದುರುಳನುರದ ದಂಡೆ । ಕರುಳ ಮುಡಿಸಿ ನಿನ್ನ । ತುರುಬ ಕಟ್ಟಿಸುವೆನಂಜದಿರು ॥ ೨ ॥ ತರುಣಿ ಸುವ್ರತೆ ನೀನು । ನಿನ್ನ ಬಾಧಿಸಿದಂಥ । ದುರಿತಾತ್ಮರುಗಳು ಬಾಳುವರೆ ॥ ಅರಸನಾಡಿದರಣ್ಯ । ವಾಸ ತೀರಲಿ ದುಷ್ಟ । ನೆರವಿ ತೀರ್ಚಿಸುವೆ ಕೇಳಬಲೆ ॥ ೩ ॥

ಭಾಮಿನಿ

ಅರಸ ಕೇಳಿಂತೆಂದು ಮುರರಿಪು । ತರುಣಿಯನು ಮೆಯ್ದಡವಿ ಕೌಂತೇ । ಯರನು ಮನ್ನಿಸಿ ಪುರಕೆ ಪಯಣೋದ್ಯೋಗಮನನಾದ ॥ ಬರವನೇ ಕಾಣುತ್ತ ಬಳಿಕಾ । ಮುರಹರಗೆರಗಿ ಸಮ್ಮುಖದಲ । ಯ್ವರು ರಚಿಸಿ ಪಿತೃಯಜ್ಞವನು ಬೀಳ್ಕೊಟ್ಟರಚ್ಯುತನ ॥ ೧ ॥

ವಾರ್ಧಿಕ

ಮುರಹರಂ ಪಾಂಡುನಂದನರನುಪಚರಿಸಿ ನಿಜ । ಪುರಕೆ ಬಿಜಯಂ ಗೆಯ್ಯಲಿತ್ತಲುಂ ಕಾಮ್ಯಕಾ । ವರ ವಿಪಿನಮಂ ಪೊರಟು ಹಲವು ಗಿರಿವನಗಳಂ ಕಳೆಕಳೆದು ಪಾಂಡುಸುತರು ॥ ಬರುತೊಂದು ಘನ ರಮ್ಯತರಮಾದ ವನ ದೊಳಂ । ದಿರುತಿರಲ್ ಮರುತಜಂ ತಂದ ಜಂಬೂಫಲದ । ಪರಿಯನುಂ ಸಹದೇವನಿಂದರಿದು ಧರ್ಮಜಂ ಮರುಗಿ ಹರಿಯಂ ನೆನೆದನು ॥ ೧ ॥ ಮಾಧವಂ ಬಂದಾಗಲಾ ಫಲವನುಂ ಧರ್ಮ । ಜಾದಿಗಳನಾ ಕಣ್ವಮುನಿ ಶಪಿಸದಂತೆ ಮ । ತ್ತಾ ಧರಿತ್ರೀರುಹದ ಶಾಖೆಗಂ ಮುನ್ನಿನಂತಡರಿಸಿದನವನಿ ಪರನು ॥ ಮೋದದಿಂದಪ್ಪಿ ದ್ರೌಪದಿಯನುಪಚರಿಸಿ ದಾ । ಮೋದರಂ ಪುರ ಕಯ್ದಲಿತ್ತಲುಂ ಪಾಂಡವರ್ । ಭೂದಿವಿಜರೋಳಿಯಿಂದಾ ವನವನುಳಿದಯ್ದಿ ದ್ವೈತವನಮಂ ಸಾರ್ದರು ॥ ೨ ॥ ಶಿಲೆಗಳಿಂ ಸಂಧಿಸಿದ ಕೊಳಗಳಿಂ ರಂಜಿ ಸುವ । ಬಿಲಗಳಿಂ ಪರಿವೃತಿಹ ಜಲಗಳಿಂದೆಸೆವ ನೈ । ದಿಲೆಗಳಿಂ ಝೇಂಕರಿಸು ವಳಿಗಳಿಂದುಲಿವ ಕೋಗಿಲೆಗಳಿಂ ನುಡಿವುತಿರ್ಪ ॥ ಗಿಳಿಗಳಿಂ ಪೊಳೆವ ತಳಿರೆಲೆ ಗಳಿಂ ರಸಭರಿತ । ಫಲಗಳಿಂ ಸುಮದ ಗೊಂಚಲುಗಳಿಂಗೆರಗಿದ ಕ । ದಳಿ ಗಳಿಂದಿಡಿದಿರ್ದ ಪೊಲಗಳಿಂ ನೋಡೆ ಸುಸ್ಥಳಗಳಿಂ ವನವೆಸೆದುದು ॥ ೩ ॥

ಕಂದ

ಇಂತಾರಣ್ಯದೊಳಾ ದ್ವಿಜ । ಸಂತಾನವ ಸಲಹುತ ಪಾಂಡವರಿರ ಲಾಗಂ ॥ ಸಂತಸದಿ ಬಾದರಾಯಣ । ನುಂ ತಳುವದೆ ನಡೆತಂದಂ ವಿನಯ ದೊಳಾಗಂ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಬಂದ ವೇದವ್ಯಾಸಮುನಿಯು ಕಂಡವನೀಶ । ನಂದಿದಿರೆದ್ದು ತತ್ಪವಕೆ ॥ ವಂದಿಸಿ ಬಹು ಭಕ್ತಿಯಿಂದಲಾತನ ಕರೆ । ತಂದನು ಪರ್ಣಮಂದಿರಕೆ ॥ ೧ ॥ ಪರಮ ಸಂಯಮಿಗೆ ದರ್ಭಾಸನವಿತ್ತುಪ । ಚರಿಸಿ ಪೂಜಿಸಿ ಕಯ್ಯ ಮುಗಿದ ॥ ಧರಣಿಪಾಲಕನ ಮೆಯ್ದಡವಿ ಪ್ರೇಮದಲಿ ಕು । ಳ್ಳಿರಿಸಿ ಮತ್ತಿಂತೆಂದನಾಗ ॥ ॥ ೨ ॥ ಎಲೆ ಭೂಪ ವನವಾಸವಾಯ್ತೆಂದು ಮನದೊಳ । ಗಲಸದಿರ್ ತವ ಸತ್ಯದಿಂದ ॥ ಇಳೆಯು ಕೈಸೇರುವುದಿನ್ನು ಖೂಳರು ತಮ್ಮಿಂ । ದಳಿವರು ಕೌರವಾದಿಗಳು ॥ ೩ ॥

ಭಾಮಿನಿ

ಎನುತ ಮತ್ತಾ ಮುನಿ ರಹಸ್ಯದಿ । ಜನಪಗೀಶ್ವರಬೀಜಮಂತ್ರವ । ವಿನಯದಿಂದುಪದೇಶವಿತ್ತಾ ವಿಧಿಯ ನೆರೆ ತಿಳುಹಿ ॥ ಅನಘ ಪೇಳಿದನರುಹು ನೀನ । ರ್ಜುನನಿಗಾ ನರನಿಂದ್ರಕೀಲದ । ವನದಿ ಭಜಿಸಲಿ ಹರನನಾ ಶಿವ ನೊಲಿವ ನಿಮಗೆಂದ ॥ ೧ ॥

ರಾಗ ಭೈರವಿ ಝಂಪೆತಾಳ

ಎನುತ ತನ್ನಾಶ್ರಮಕೆ । ಮುನಿಪ ತೆರಳಲ್ಕಿತ್ತ । ಜನಪನೇಕಾಂತ ದೊಳ । ಗನುಜನನು ಕರೆದು ॥ ೧ ॥ ಹರನ ಮಂತ್ರಾಕ್ಷರವ । ನರುಹಿ ನೃಪ ಬಳಿಕಲಾ । ನರಗೆಂದ ಭಜಿಸು ಶಂ । ಕರನ ದೃಢಮನದಿ ॥ ೨ ॥ ಹಲವು ನಯ ನೀತಿಯನು । ತಿಳುಹಿ ಬೇಗದಿ ನಿನಗೆ । ಒಲಿಯಲೀಶ್ವರನೆನುತ । ಕಳುಹಿದನು ಮುದದಿ ॥ ೩ ॥

ಭಾಮಿನಿ

ಅರಸನನು ಬೀಳ್ಕೊಂಡು ವಿಪ್ರರ । ಹರಕೆಗೊಂಡಾ ಪಾರ್ಥನಿರದು । ತ್ತರಕೆ ನಡೆದನು ಹಲವು ಗಿರಿ ಕಾನನವನುರೆ ಕಳೆದು ॥ ಪರಮಪಾವನ ಇಂದ್ರಕೀಲದ । ವರವನಕೆ ಬರಲಂದು ಕೇಳ್ದೈ । ನರನೆ ಪುಣ್ಯಕ್ಷೇತ್ರವಿದೆ ಯೆಂದುದು ನಭೋವಚನ ॥ ೧ ॥

Scanned by CamScanner

ವಾರ್ಧಿಕ

ಅಶರೀರವಾಣಿಯಂ ಕೇಳ್ದತಿವಿಲಾಸದಿಂ । ದಸಮಬಲ ಪಾರ್ಥನಾ ಮರುದಿವಸದುದಯದೊಳ್ । ಕುಶಲದಿಂ ಮಿಂದು ವಿಧಿವಿಹಿತದಿಂದರ್ಕಗರ್ಘ್ಯವನಿತ್ತು ಭಕ್ತಿಯಿಂದ ॥ ಬಿಸಜಾಕ್ಷ ಸುಮನಸರ್ಗಕ್ಷಿಯಿಂದೆರಗಿ ತಾ । ನೆಸೆವ ಕಿಗ್ಗಟ್ಟಿನ ಕಠಾರಿಯಂ ಪೆಗಲಿಗೇ । ರಿಸಿದ ಬತ್ತಳಿಕೆಯಿಂದೆತ್ತಿ ದೋರ್ದಂಡಗಳೊಳಭವನಂ ಧ್ಯಾನಿಸಿದನು ॥ ೧ ॥

ರಾಗ ಮಾರವಿ ಏಕತಾಳ

ಇಂತರ್ಜುನ ತಾನೇಕೋಭಾವಮೊ । ಳಂತಕವೈರಿಯನು ॥ ಅಂತರಂಗದಿ ಧ್ಯಾನಿಸುತಿರೆ ದ್ವಿಜರೂ । ಪಂ ತಳೆದಮರೇಂದ್ರ ॥ ೧ ॥ ನಡೆತಂದಾತ್ಮಜಗೆಂದನಿದೇನೈ । ಖಡುಗ ಕಠಾರಿಗಳು ॥ ಪಿಡಿದಿಹೆ ಧನು ಶರಸಹಿತಲಿಹುದು ಬೆಂ । ಗಡೆಯಲಿ ಬತ್ತಳಿಕೆ ॥ ೨ ॥ ಏನಿದು ನಿಜದ ಸಮಾಧಿಯೊಡಂಭವೊ । ನೀನುಸಿರೆಂದೆನಲು ॥ ತಾನಕ್ಷಿಯನರಳಿಚುತೆಂದನು ಮು । ತ್ತಾನರನಾತನೊಳು ॥ ೩ ॥ ಏಕಿನಿತೆಂಬೆ ಧರಾಮರ ಕೇಳು ಪಿ । ನಾಕಿಯ ಚರಣವನು ॥ ಏಕೋಭಾವದಿ ಸ್ತುತಿಸುವೆ ನಿನಗೆ ವಿ । ವೇಕವಿದಿಲ್ಲವಲಾ ॥ ೪ ॥ ಮಾನಸವೇ ದೃಢವಲ್ಲದೆ ಡಂಭದೊ । ಳೇನಹುದೆಂದೆನಲು ॥ ತಾನಮರಾಧಿಪನೆಂಬುದ ತಿಳುಹಿಸಿ । ಸಾನಂದದೊಳೆಂದ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಮಗನೆ ಕೇಳ್ ತವ ದೃಢಕೆ ಮೆಚ್ಚಿದೆ । ನಗಜೆಯರಸನು ಬರಲಿನ್ನಯ । ಬಗೆಯಭೀಷ್ಟವ ಕೊಡಲಿ ಸೇರಲಿ । ಜಗತಿ ನಿನಗೆ ॥ ೧ ॥ ಇಂತೆನುತ ಸುತಗುಸಿರಿ ಸುಮನಸ । ಕಾಂತ ತೆರಳಲ್ಕಿತ್ತ ಫಲುಗುಣ । ನಂತರಂಗದಿ ಭಜಿಸುತಿರ್ದನು । ಕಂತುಹರನ ॥ ೨ ॥ ದಿವಸ ಮೂರಕ್ಕೊಮ್ಮೆ ಫಲವನು । ಸವಿಯುತಿರ್ದನು ಮೊದಲು ತದುಪರಿ । ದಿವಸ ವಾರಕೆ ಫಲವ ಕೊಳ್ಳುತ । ಶಿವನ ಭಜಿಸೆ ॥ ೩ ॥ ಮತ್ತೆ ತರಗೆಲೆಯಿಂದ ದಿನಗಳ । ನುತ್ತರಿಸುತಿರುತಿರ್ದುಬಳಿಕಾ । ಚಿತ್ತಶುದ್ಧಿಯೊಳಿರ್ದ ಶ್ವಾಸನು । ರುತ್ತನಾಗಿ ॥ ೪ ॥ ವರಸಮಾಧಿಯೊಳಯ್ದೆ ದೃಷ್ಟಿಯು । ನಿರಿಸಿ ನಾಸಾಗ್ರದಲಿ ಮೇಲ್ಮೊಗ । ವಿರಿಸಿ ಭರ್ಗನ ಭಜಿಸುತಿರ್ದನು । ಮರೆದು ತನುವ ॥ ೫ ॥

ಶಾರ್ದೂಲವಿಕ್ರೀಡಿತಂ

ಸುರನಾಥಾರ್ಚಿತಪಾದನಂ ಗಿರಿಶನಂ ಸರ್ವೇಶನಂ ಈಶನಂ । ತರುಣಾದಿತ್ಯಸಹಸ್ರಕಾಂತಿಯುತನಂ ಸನ್ಮಾರ್ಗನಂ ಭರ್ಗನಂ । ಗಿರಿಜಾತಾವರನಂ

ಕಪಾಲಧರನಂ ಗಂಗಾರ್ದ್ರನಂ ರುದ್ರನಂ । ನರನೇಕೋಮನದಿಂದೆ ತಾಂ ಭಜಿಸಿದಂ ಫಾಲಾಕ್ಷನಂ ತ್ರ್ಯಕ್ಷನಂ ॥ ೧ ॥

ಭಾಮಿನಿ

ನರನು ತಾನಿಂತಾ ಭವನ ಹೃತ್ । ಸರಸಿಜದಿ ನೆಲೆಗೊಳಿಸಿ ತಾನೇ । ಹರನೆನಿಪ ಸಚ್ಚಿನ್ಮಯಾನಂದಾಬ್ಧಿಯಲಿ ಮುಳುಗಿ ॥ ಮರೆದು ದೇಹವನಯ್ದೆ ತಪದಿಂ । ದಿರಲು ತಜ್ಜ್ವಾಲೆಯಲಿ ಮೂಜಗ । ಮರುಗಿದುದು ಮಾನಸವದೇಂ ದೃಢವೋ ಧನಂಜಯನ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರಸ ಕೇಳಲ್ಲಿರುವ ಋಷಿಗಳು । ನರನ ತಪದುರಿಗಾನಲಾರದೆ । ಮರುಗಿ ತಾವೊಟ್ಟಾಗುತೆಂದರು । ನೆರೆದು ಭಯದಿ ॥ ೧ ॥ ಬಂದು ನರನನು ನೋಡಿ ತಮ್ಮೊಡ । ನೆಂದನಾರಿವನೊಡನೆ ಶಸ್ತ್ರಗ । ಳಿಂದ ರಂಜಿಸುವನು ತಪಸ್ಸಿಗೆ । ನಿಂದಿರುವನು ॥ ೨ ॥ ನುಡಿಸಿದರೆ ತಾ ನುಡಿಯನೆಮಗೀ । ತೊಡಕದೇತಕ್ಕೇಳಿರೆಲ್ಲರು । ಮೃಡಗೆ ದೂರುವೆವೆಂದು ಬೇಗದಿ ನಡೆದರಂದು ॥ ೩ ॥

ವಾರ್ಧಿಕ

ಧುರದ ಕಣದಂತೆ ಖಡ್ಗಿಗಳಿಂದ ರಾಜಿಸುತ । ಸುರಪನಂತನುದಿನಂ ಸುರಭಿಯುತಮಾಗಿ ಪಂ । ಕರುಹಭವನಂತೆ ಗೋಸಂವೃತಂ ತಾನಾಗಿ ಅಭ್ರದಂತಕರ್ಾನ್ವಿತಂ ॥ ಹರಿಯಂತೆ ಶ್ಯಾಮವರ್ಣನುಮಾಗಿ ಭಟನಂತೆ । ಸುರಗಿಯಿಂ ತಾ ರಂಜಿಸುತ್ತಯ್ದೆ ಮುಖದಂತೆ । ನಿರತಮಂ ಶಿಖಿಸಮನ್ವಿತನಾಗಿ ಕೈಲಾಸಗಿರಿವರನಿರಲ್ ಕಂಡರು ॥ ೧ ॥

ಕಂದ

ಇಂತಪ್ಪಾ ರಜತಾದ್ರಿಯ । ನುಂ ತಳುವದಡರ್ದು ಮೌನಿನಿಕರಂ ಭರದಿಂ ॥ ಅಂತಕಹರನಂ ದೂರದಿ । ನಿಂತೀಕ್ಷಿಸಿ ಜಯ ಜಯವೆಂದಡಗೆಡದರಾಗಳ್ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಕಾಲಿಗೆರಗುತೆಮ್ಮ ಪಾಲಿಸೆಂದೆನೆ ಮೌನಿ । ಜಾಲವ ಕಂಡು ಶಂಕರನು । ಏಳಿರೈ ಸಾಕಿನ್ನು ಗೋಳುಗುಟ್ಟುವುದೇಕೆ । ಪೇಳಿ ಬಂದೆಡರನೆಂದೆನಲು ॥ ೧ ॥ ಅರುಹಿ ಬೇಗೆಂದೊರ್ವ ನೀನೆ ಪೇಳೆಂದೊರ್ವ । ಹಿರಿಯುವನುಸಿರಲೆಂದೊರ್ವ ॥ ಅರಿಯೆ ನಾನೆಂದೊರ್ವ ಕಿರಿಯವನೊಂದೊರ್ವ । ನರುಹುವೆನೆಂದೊರ್ವ

Scanned by CamScanner

ಪಾರ್ವ ॥ ೨ ॥ ಪರಮೇಶ ಕೇಳ್ ನಿನ್ನ ಕೃಪೆಯಿಂದೀವರೆಗೆಯ । ಧ್ವರ
ಕರ್ಮಂಗಳನು ಸಾಂಗದಲಿ ॥ ವಿರಚಿಸುತಲ್ಲಿ ಸ್ವಸ್ಥದೊಳಿರ್ದೆವಿಂದಿನ । ನರನೊ
ಕಿನ್ನರನೊ ಖೇಚರನೊ ॥ ೩ ॥ ಬಂದಲ್ಲಿ ತಪಗೆಯ್ವನವನ ಕಂಡರೆ ಋಷಿ ।
ಯಂದವಲ್ಲಾ ಯುಧವಿಹುದು ॥ ಬೆಂದೆವು ತಪಜ್ವಾಲೆಯಿಂದ ನಿಶ್ಚಯವಿದು ।
ಮುಂದೆಂಬುದೇನೆಂದು ನಮಿಸೆ ॥ ೪ ॥

ಕಂದ

ಹರನಾಲಿಸುತಂತರ್ಯದೊ । ಳರಿದೆಮ್ಮವನಾತನಂಜದಿರಿ ನೀವವನಂ ॥
ತ್ವರಿತದೊಳಲ್ಲಿಂದೆಬ್ಬಿಸಿ । ಯಿರಿಸುವೆ ತದ್ವನದಿ ನಿಮ್ಮನೆಂದೆನೆ ಮಣಿದರ್ ॥೧॥

ಭಾಮಿನಿ

ಅರಸ ಕೇಳಿಂತಭವನೆರಗಿದು । ತೆರಳೆ ಮೌನಿಗಳಿತ್ತಲೀಶನು । ಕರೆದು
ನಂದೀಶ್ವರನ ಕೂಡಿಸು ಭೂತನಿಕರವನು ॥ ತ್ವರಿತದಿಂ ನೀನೆಂದು ಪಾರ್ವತಿ ।
ವೆರಸಿ ತಾನೇ ಶಬರರೂಪವ । ಧರಿಸುತಿದ್ದನು ಶರಣರರಸನ ದರುಶನಾರ್ಥಿ
ಯಲಿ ॥ ೧ ॥ ಹರ ಕಿರಾತರ ತೆರದಿ ಬೇಟೆಗೆ । ತೆರಳುವನು ಬಹುದೆಂಬ
ನಂದೀ । ಶ್ವರನ ವಚನಕೆ ನೆರೆದರಾ ಪ್ರಮಥರುಗಳೊಗ್ಗಿನಲಿ ॥ ಕರಿವದನ
ಷಣ್ಮುಖರು ಭೈರವ । ಶರಭ ರೇಣುಕ ಮುಖ್ಯರಾ ಶಂ । ಕರನೊಡನೆ ನಡೆ
ತಂದರಂದು ಕಿರಾತರೂಪದಲಿ ॥ ೨ ॥

ರಾಗ ಮಾರವಿ ಏಕತಾಳ

ಲಾಲಿಸು ಧರಣೀ । ಪಾಲ ಚಿದಾತ್ಮನ । ಲೀಲೆಯ ನಾ ಶಬ । ರಾಳಿ
ಸಹಿತ ನರ । ನಾಳುತನವ ನೋ । ಳ್ಪಾಲೋಚನೆಯನು । ತಾಳುತ ವರ
ಇಂದ್ರ । ಕೀಲ ಪರ್ವತಕೆ ॥ ಬಂದರಂದು ॥೧॥ ಎಲೆ ಎಲೆ ನೋಡ್ ಹೆ । ಬ್ಬುಲಿ
ಹುಲಿ ಕೇಸರಿ । ಕಲಿತಮರ ದ್ವಿಜ । ಕುಲವಾರ್ಭಟಿಸಲು । ಮಲೆತಿವರಲಸದೆ ।
ಕೊಲಿರೆಂದುಲಿವುತ । ತಳುವದೆ ಬೇಡರ । ಕುಲವು ಗರ್ಜಿಸುತ ॥ ಬಂದರಂದು ॥
॥ ೨ ॥ ವಿಧವಿಧದಸ್ತ್ರದಿ । ಸದೆವುತ ಮೃಗಗಳ । ಮದನಹರನ ಗಣ । ರೊದಗಿ
ಗರ್ಜಿಸೆ ಕೇ । ಳಿದು ಮೂಕನೆನಿಪವ । ಮದಮುಖನೋರುವ । ನದುಭುತ
ಕಿಟಿರೂ । ಪದೊಳಯ್ತಂದ ॥ ಏನನೆಂಬೆ ॥ ೩ ॥ ಬಂದೀ ವ್ಯಾಧರ । ವೃಂದವ
ಕಾಣುತ । ತಿಂದು ತೇಗುವೆನಿವ । ನೆಂದಾರ್ಭಟಿಸಲು । ಕಂದುಗೊರಳ
ಕಂ । ಡಂದು ಸಮಯವಿ । ದೆಂದೆಚ್ಚನು ಭರ । ದಿಂದಲಿ ಖಳನ ॥
ಏನನೆಂಬೆ ॥ ೪ ॥

ಕಂದ

ಘಟ್ಟಿಗಿದಂಬಿನೊಳಸುರಂ । ದಿಟ್ಟನೆಯಭವನ ತಂತ್ರದಿ ಗಜರುತ
ನರನಂ ॥ ಮುಟ್ಟವಿಸಲು ಕಂದೆರವುತ । ದಿಟ್ಟಿಸುತವನೆಚ್ಚು ಕೆಡಹಿದನು
ಸೂಕರನಂ ॥ ೧ ॥

ರಾಗ ತೋಡಿ ಏಕತಾಳ

ಏನೆಂಬುತ್ತಾ ನುಡಿತಿದ್ದಿ ಮ್ಯಾ । ಯೆಲೆ ಹಾರುವಯ್ಯ । ಏನೆಂಬುತ್ತಾ
ನುಡಿತಿದ್ದಿ ಮ್ಯಾ ॥ ಪ ॥ ಏನೆಂಬುತ್ತಾ ನುಡಿವುತಿದ್ದಿ । ಹೀನಲತೆಯ ತಿಂಬು
ತಿದ್ದಿ । ಮಾನವಂತ ನಿನಗಿದು ಸರಿಯೆ ॥ ಅ ॥ ಕೊರಳೊಳು ಜಂಝಾರ
ವೇನು । ಸರಳು ಬಿಲ್ಲು ಪಿಡಿದುದೇನು । ಕಳ್ಳತಪಸಿವೇಷ ನಿನಗೇಕೆ ॥ ೧ ॥
ಒಳ್ಳೆವ ನೀನೆಂಬುದೇನು । ಹೊಳ್ಳು ಮೇಲಕೆತ್ತುದೇನು । ಒಳ್ಳೆ ಶಾಣಾತನವು
ನಿನಗೇಕೆ ॥ ೨ ॥ ಜುಟ್ಟು ಜಡೆಯ ಪಾರ್ವ ನೀನು । ತೊಟ್ಟ ಸೀಸಕವಚ
ವೇನು । ಮುಟ್ಟಮುಟ್ಟ ನೀರೊಳ್ ಮುಳುಗುವೆ ॥ ೩ ॥ ಸರಳು ತಾಗಿ
ಕಿಟಯು ಬಂದಯ್ತೆ । ಉರಿಯು ತಾಳಲಾರದಯ್ತೆ । ಬರುಬರುತಲೆ
ಸತ್ತಯ್ತೆ ॥ ೪ ॥ ಕಪಟಮಾಡಿದರೆ ಕಡಿವೆವು ಸಂದಾ । ಕಿಟಿಯ ಬಿಟ್ಟರೊಳ್ಳೆ
ತೆಂದ । ಇಷ್ಟು ಕೊಡುವೆ ತಿಂಬೆಯಾದರ್ ನಿನಗೆ ॥ ೫ ॥ ಹಕ್ಕಿ ರಂಗಸ್ವಾಮಿ
ಯಾಣೆ । ಮಿಕ್ಕ ಮಾತನಾಡಬೇಡ । ತಕ್ಕುದಲ್ಲ ತಪಸಿ ನಿನಗೇಕೆ ॥ ೬ ॥
ಏನ ಹೇಳ್ವೆ ಕಳ್ಳ ತಪಸಿ ನೀನು । ಶ್ವಾನಮರಿಗಳ ಬಿಟ್ಟಿವು ನಾವು । ಸಾನು
ರಾಗದಿಂದಲ್ಹೊರಿಸ್ಯೇವು ॥ ೭ ॥

ಭಾಮಿನಿ

ಧರಣಿಗುರುಳಿದ ಸೂಕರನ ಶಂ । ಕರನು ಕಂಡರ್ಜುನನ ಧೈರ್ಯವ ।
ಪರಿಕಿಸುವ ಬಗೆಯಿಂದ ಬಂದೆಮ್ಮಾಯುಧದ ಮೊನೆಗೆ ॥ ಹರಣಗೊಟ್ಟುದು
ಹಂದಿ ತೆಗೆಯೆನೆ । ನರನು ಮದಗರ್ವದಲಿ ಶಿವನೆಂ । ದರಿಯದೆಂದನು ಹರನ
ಮಾಯೆಯ ಮಿರ್ವರ್ ಯಾರೆಂದ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಎಲವೊ ಶಬರಯೆನ್ನ ಶರದೊ । ಳಳಿದುದೀ ವರಾಹವಿದರ । ಬಳಕೆ
ನಿನಗದೇಕೆ ಸಾರು । ಕೆಲಿಕೆ ಮನದಲಿ ॥ ಛಲಗಳುಳ್ಳಡೆಮ್ಮ ಸೆಣಸು । ಸುಲಭ
ವಲ್ಲ ತೀರ್ಚಬೇಡ । ತಲೆಯ ಋಣವ ಕಳುಹು ನಿನ್ನ । ದಳದ ಪತಿಯನು ॥
॥ ೧ ॥ ಎನಲು ನಗುತಲಭವನವನ । ಮನದ ಧೃತಿಗೆ ಹಿಗ್ಗುತಾಗ । ಘನ
ಪರಾಕ್ರಮವನು ತೋರ್ದ । ವನಿತೆ ಗಿರಿಜೆಗೆ ॥ ಮನಸಿನಲ್ಲಿ ಭಕ್ತನೊಡನೆ ।

Scanned by CamScanner

ಸೆಣಸುವರ್ತಿಯಿಂದ ಸುರಪ । ತನುಜಗೆಂದನಾ ಸಹಸ್ರ । ದಿನಪತೇಜನು ॥೨॥ ಲಾಲಿಸಿನ್ನು ತಪಸಿ ತಪಸಿ । ನೂಳಿಗವನು ಬಿಟ್ಟು ನಮ್ಮೊ । ಳಾಳುತನಕೆ ಬರುವೆ ಯೇನೊ । ಖೂಳರಂದದಿ ॥ ಕೇಳು ನಿನಗೆ ಶಸ್ತ್ರಚಯದ । ಮೇಳವೇಕೆ ಬಿಡೆವು ನಮ್ಮ । ಕೋಲಲಳಿದ ಕಿಟಿಯನೆಂದ । ಫಾಲನೇತ್ರನು ॥ ೩ ॥ ಮರುಳು ವ್ಯಾಧ ।ಬನದ ಹುಲ್ಲೆ । ಮರಿಗಳನ್ನು ಮರೆಯೊಳಿದ್ದು । ತರಿದ ಬಲುಹ ತೋರು ತ । ನ್ನಿದಿರು ಗರ್ವದಿ ॥ ಹರನ ಭಕ್ತರಾವು ಶಸ್ತ್ರ । ವೆರಸಿ ತಪವ ಮಾಳ್ಪೆವಧಟ । ನರಿಯದೆಮ್ಮ ಕೆಣಕಬೇಡ । ಮರುಳೆ ಸುಮ್ಮನೆ ॥ ೪ ॥ ಎಂದ ಪಾರ್ಥನೊಡನೆ ಶಬರ । ನೆಂದನಹುದು ಮನದಿ ಮೃಗವ । ಕೊಂದು ಮೆಲುವುದೆಮ್ಮ ಕುಲಕೆ । ಸಂದ ಬಿರುದದು ॥ ಇಂದುಧರನು ಬಂದು ತಡೆದ । ರಿಂದು ಬಿಡೆವು ಛಲವನೆನಲಿ । ಕಂದು ನರನು ಖತಿಯೊಳಿದಿರು । ನಿಂದ ನಾಚಿಗೆ ॥ ೫ ॥

ಕಂದ

ಕಿನಿಸಿಂದಂ ಸಿತತುರಗಂ । ಧನು ಶರ ಕೊಂಡಕ್ಷಿಯಿಂದುಗುಳುತ ಕಿಡಿಯಂ ॥ ವನಚರ ನಿನಗೇಕೆನುತಂ । ಘನ ಗರ್ವದಿ ಪೂಡಿದನುದ್ಧತ ಮಾರ್ಗಣವಂ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಪೂಡಿ ಶರವ ಸೇದಿ ಕೆನ್ನೆಗುಗಿದು ಪಾರ್ಥನು । ಬೇಡನೆಂಬ ಬಗೆಯೊಳೆಚ್ಚನಯ್ದೆ ಹರನನು ॥ ಕೂಡೆ ಕಿಡಿಯನುಗುಳಿ ಬರುವ ಬಾಣತತಿಯನು । ನೋಡಿ ಗಣರು ಬೆದರಲೆಂದನವರೊಳಭವನು ॥ ೧ ॥ ಗಜಬಜಿಸುವಿರೇತಕೆನಗೆ ಭಜಕನೀತನು । ಸುಜನ ಜನರು ನೋಡಿರಿವನ ಭುಜದ ಬಲುಹನು ॥ ಭಜಕನೊಡನೆ ಸೆಣಸಿ ನೋಳ್ಪೆನೆನುತಲೀಶನು । ವಿಜಯನತ್ತ ನೋಡಿ ಪಿಡಿದ ನಗುತ ಧನುವನು ॥ ೨ ॥ ಎಲವೊ ತಪಸಿ ಕದನಕಾಸೆ ಪಡುವೆಯೇತಕೆ । ಕಲಹಕಾವು ಬಂದುದಿಲ್ಲ ನಿನ್ನ ಮೌನಕೆ ॥ ಸಲುವ ಬಿರುದು ನಮ್ಮ ಕುಲಕೆ ಬಿಡೆವು ಛಲವನು । ನಿಲು ನಿಲಾದಡೆನುತ ತರಿದನವನ ಶರವನು ॥ ೩ ॥ ಫಡ ಕಿರಾತ ಬೇಡ ನಿನಗೆ ಶಪಥವೆನ್ನಲಿ । ಬಡ ತಪಸ್ವಿಯೆಂದು ಬಗೆದೆ ನಿನ್ನ ಮನದಲಿ ॥ ಒಡಲ ಬಗಿವೆನೊಂದು ಶರದಿ ನೋಡೆನುತ್ತಲಿ । ಮೃಡನನೆಚ್ಚನಸ್ತ್ರಕುಲದಿ ಮತ್ತೆ ಖತಿಯಲಿ ॥ ೪ ॥ ಬಡವನಾಗು ಭಟನೆಯಾಗು ವ್ಯರ್ಥವೀ ನುಡಿ । ಕೊಡುವೆಯೇತಕೆಮಗೆ ಶಿರವ ಪಿಂತೆ ಸಾರ್ ನಡಿ ॥ ತೊಡುವ ಶರಕೆ ಕರುಣವಿಲ್ಲ ನೋಡೆನುತ್ತಲಿ । ಮೃಡನು ನರನ ಮುಸುಕೆ ಶಸ್ತ್ರಗಡಣದಿಂದಲಿ ॥೫॥

ವಾರ್ಧಿಕ

ಹರನ ಶರಜಾಲಮಂ ತರಿದು ಪ್ರತಿಕೂಲಮಂ । ಬರಮುಯ್ದೆ ಬಾಣಮಯಮಾಗಲೆಚ್ಚಂ ವಿಜಯ । ನುರಿಯುಗುಳುತಂಬುಗಳ್ ಬಳಿಯಂಬಿಗಿಂಬುಗಳ್ ಕಾಣದಂತಭ್ರಕಡರೆ ॥ ಹರನದರ ಘಾತಿಯಿಂ ಕೆರಳಿ ನಸು ಖಾತಿಯಿಂ । ತರಿಯುತಾ ಶರಗಳಂ ನರನನಬ್ಬರಗಳಂ । ಪರಿಕಿಸಿ ವಿಲಾಸದಿಂ ಕೈರಾತವೇಷದಿಂ ಸೆಣಸುತಿರ್ದಂ ನರನೊಳು ॥ ೧ ॥

ರಾಗ ಭೈರವಿ ಏಕತಾಳ

ಹರನೆಂದರಿಯದೆ ನರನು । ಮಗು । ಳುರುತರ ಮಂತ್ರಾಸ್ತ್ರವನು ॥ ಭರದಿಂದೆಸುತಿರಲಿವನು । ಘನ । ಹರುಷದಿ ನುಂಗಿದ ಶಿವನು ॥ ೧ ॥ ಕಂಡರ್ಜುನ ಖಾತಿಯಲಿ । ಕೆಂ । ಗೆಂಡ ಕಾರುತ ನೇತ್ರದಲಿ ॥ ಕೊಂಡಕ್ಷಯ ಬಾಣವನು । ಮುಂ । ಗೊಂಡಭವನ ಮುಸುಕಿದನು ॥ ೨ ॥ ಕಿರುನಗೆಯಲಿ ಶಂಕರನು । ಬಹ । ಶರಗಳ ತರಿದೊಟ್ಟಿದನು ॥ ನರನದ ಕಾಣುತಲೆಂದೆ । ಮನ । ಮರುಗುತ ಪೇಳಿದನೊಂದ ॥ ೩ ॥

ಭಾಮಿನಿ

ಧರೆಯೊಳೆನಗಿದಿರಾಗಿ ಕಾದುವ । ಧುರಸಮರ್ಥರ ಕಾಣೆನೀ ಶಾ । ಬರನದೇಂ ಸಾಹಸಿಯೊ ತೀರ್ಚಿದನಕ್ಷಯಾಸ್ತ್ರವನು ॥ ಹರನ ನಾ ಮೆಚ್ಚಿಸುವೆನೆಂದರೆ । ದುರುಳ ಕಂಟಕನಾದನೈ ಬಡಿ । ದುರುಳಿಚುವೆ ನಾನೆನುತಲಪ್ಪಳಿಸಿದನು ಚಾಪದಲಿ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಧನುವಿನಿಂದ ಪೊಡೆಯೆ ಕಾಣು । ತನಘ ದಂಡೆಯಿಂದಲಂದು । ಝುಣುಗೆ ಕಂಡು ಪೊಯ್ದನಾಗ । ಲನಲನೇತ್ರನ ॥ ಬಿನುಗು ಶಬರಯೆನ್ನ ಕೂಡೆ । ಸೆಣಸಬೇಡವೆನುತ ರೋಷ । ಕನಲಿ ಭರದಿ ನಿಲಲು ಬಳಿಕ । ಮನದ ಸತ್ತ್ವದಿ ॥ ೧ ॥ ಕಂಡು ಹರನು ಪಾರ್ಥನು । ದ್ದಂಡತನದಿ ಧನುವ ಸೆಳೆದು । ಕೊಂಡ ನರನು ಧನುವ ರೋಷ । ಗೊಂಡು ನಗುತಲೆ ॥ ಚಂಡಬಲ ಕಿರೀಟಿ ಖಡ್ಗ । ಕೊಂಡು ಫಡ ಕಿರಾತ ನಿನ್ನ । ದಿಂಡುದರಿವೆನೆನುತಲೆರಗೆ । ರುಂಡಮಾಲನು ॥ ೨ ॥ ಕರದ ಖಡ್ಗವನ್ನು ಸೆಳೆಯೆ । ನರನು ಮರವೆಯಿಂದ ಮತ್ತೆ । ಗಿರಿಶನೆಂದು ತಿಳಿಯದಯ್ದೆ । ಮರನ ಕೊಂಬಿಲಿ ॥ ಭರದಿ ಪೊಯ್ಯಲಾಗ ಕಂಡು । ದುರುಳ ಕೆಡೆಯೆನುತ್ತಲಿಡಲು । ತರಿವುತದನು ಪಾರ್ಥಗೆಂದ ।

ಪುರವಿನಾಶನು ॥ ೩ ॥ ಎಲವೊ ತಪಸಿ ಶಸ್ತ್ರಹೀನ । ರೊಳಗೆ ಸೆಣಸೆವಾವು ದೀಗ । ಬಲುಮೆಯಿರ್ದಡಿದಿರು ನಿಲ್ಲು । ಬಳಲಲೇತಕೆ ॥ ಹಲವು ದಿವಸ ತಪ ದೊಳಿರ್ದು । ತಲೆಗೆ ಪಿತ್ತವಡರಿ ಭ್ರಾಂತು । ಗೊಳಲು ಬೇಡವೆನುತ ನುಡಿದ । ಮುಳಿದು ವಿಜಯಗೆ ॥ ೪ ॥ ಎಲವೊ ಶಬರ ಬೇಡ ನಿನ್ನ । ಕಲಹಕಸ್ತ್ರವೆನ್ನ ಭುಜದ । ಬಲುಹ ನೋಡು ನಿಲ್ಲು ಮುಷ್ಟಿ । ಕಲಹಕೆಂದೆನೆ ॥ ಭಳಿರೆಯೆನುತ ಗಣರು ಬೆರಗು । ದಳೆಯಲೀಶ ಕಾಣುತವನ । ಬಲುಹ ಪೊಗಳುತೆಂದನಗಜೆ । ಯೊಳು ಸರಾಗದಿ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳೆ

ತರುಣಿ ನೋಡೀ ಪಾರ್ಥನಧಟನು । ನಿರಶನದಿ ಬಲು ದಿವಸ ತಪ ವನು । ವಿರಚಿಸಿಯೆ ಬಲು ಬಳಲಿದನು ನೋಡ್ । ಮುರಳನಿವನು ॥ ೧ ॥ ಸೆಣಸಿದನು ಸರಿಯಾಗಿ ನಮ್ಮೊಳು । ಧನುವ ಕೊಳ್ಳದೆ ಶಸ್ತ್ರವಿಲ್ಲೆಂ । ದೆಣಿಸ ದೆನ್ನೊಳು ಮಲ್ಲರಂದದಿ । ಹೆಣಗಲೆಂದು ॥ ೨ ॥ ಭುಜವನೊದರಿಸಿ ನಿಂದಿರು ವನೀ । ವಿಜಯನೊಳು ಸೆಣಸುವೆನು ನಮ್ಮಯ । ಭಜಕನೀತನನೀಕ್ಷಿಸಾತನ । ಭುಜಬಲವನು ॥ ೩ ॥

ರಾಗ ಭೋಗ ಮಟ್ಟೆತಾಳೆ

ಎನುತ ಸತಿಗೆ ಪೇಳಿ ಭರ್ಗನಯ್ದೆ ನರನಲಿ । ಹೊಣಕೆಯಿಂದ ಹೊಕ್ಕು ಹೋರುತಿರಲು ಮುದದಲಿ ॥ ಕಿನಿಸ ತಾಳ್ದು ನರನು ಹರನ ಸರಿಸಮಾನದಿ । ಸೆಣಸುತಿರಲು ಕಂಡು ಹೊಗಳ್ದರಮರರಭ್ರದಿ ॥ ೧ ॥ ಮುಗುಳೆ ಪಾರ್ಥನೆಂದ ನೆಲವೊ ಶಬರ ನಿನ್ನಯ । ನಗೆಯ ಮಾಣಿಸುವೆನು ನಿಮಿಷ ಸೈರಿಸೆನ್ನಯ ॥ ಬಿಗುಹ ನೋಡು ನೋಡೆನುತ್ತಲಧಿಕ ರೋಷದಿ । ಅಗಜೆಯರಸನುರವ ತಿವಿದ ಮತ್ತೆ ಸತ್ವದಿ ॥ ೨ ॥ ಭಳಿರೆ ತಪಸಿ ಧೀರನಹೆಯೆನುತ್ತಲೀಶನು । ಮುಳಿದು ಮುಷ್ಟಿಯಿಂದ ತಿವಿದನೊಯ್ಯೆ ನರನನು ॥ ಬಳಿಕ ರೋಷವೆತ್ತು ಪಾರ್ಥ ಹರನ ವಕ್ಷವ । ತಳುವದಾರ್ದು ತಿವಿದನೇನನೆಂಬೆ ಶೌರ್ಯವ ॥ ೩ ॥ ತಡೆದು ನರನ ಹತಿಯ ಮುರಳಿ ಮೃಡನು ತಿವಿಯಲು । ಕಡುಗಿ ವಿಜಯ ತಿವಿದ ಮುಷ್ಟಿ ಕಿಡಿಯನುಗುಳಲು ॥ ಒಡನೆ ಖತಿಯೊಳಭವ ಭರದಿ ಪೊಡೆಯೆ ಪಾರ್ಥನು । ಪೊಡವಿಗುರುಳ್ದನಯ್ದೆ ಕಾರುತರುಣಜಲವನು ॥ ೪ ॥

ಭಾಮಿನಿ

ಪಶುಪತಿಯ ಪದಹತಿಗೆ ಬಾಯೊಳು । ಬಿಸಿ ರಕುತ ಹೊರಸೂಸೆ ಪಾರ್ಥನು । ಬಸವಳಿಯೆ ಕಂಡಕಟ ಕೈತಪ್ಪಾಯಿತೆಂದೆನುತ ॥ ಶಶಿಧರನು

ಮನಮರುಗುತಿರಲಾ । ಗಸಮಬಲ ನರನೆದ್ದು ಮೆಲ್ಲನೆ । ವಶವಳಿದು ಧೃತಿ ಗೆಟ್ಟು ತನ್ನಯ ಮನದೊಳಿಂತೆಂದ ॥ ೧ ॥

ರಾಗ ಸಾಂಗತ್ಯ ರೂಪಕತಾಳೆ

ಶಿವ ಶಿವ ಕೈರಾತನೊಳು ವ್ಯರ್ಥ ಕಾದಿ ಸೋ । ಲುವದಾಯ್ತು ತನ ಗಕಟಕಟ ॥ ದಿವಿಜ ದಾನವ ಮಾನವರೊಳಗೆನಗಿದಿರು ನಿ । ಲ್ಲುವರನ್ನು ಕಾಣೆನೀವರೆಗೆ ॥೧॥ ಪಿಂದಣ ಭವದ ಪಾಪವೊ ತನಗಲ್ಲದ । ರಿಂದುವರೌಳಿಯ ಪೆರ್ಮೆಯಿಂದ ॥ ಒಂದೆ ಮನದೊಳಾನು ಭಜಿಸದಾದೆನೊ ಶಿವನ । ನಿಂದಿಸಿ ದೆನೊ ಹಿರಿಯರನು ॥ ೨ ॥ ಏಕೆ ಬಂದುದೊ ಪಾಪಿ ಸೂಕರನೆನ್ನಿದಿ । ರೇಕೆಚ್ಚೆನದನು ಹಮ್ಮಿನಲಿ ॥ ಈ ಕಿರಾತನೊಳೇಕೆ ಸೆಣಸಿದೆ ಧರೆಯೊಳ್ ವಿ । ವೇಕಬುದ್ಧಿಯದಿಲ್ಲದಾಯ್ತು ॥ ೩ ॥ ಎನುತ ಮತ್ತಾಲೋಚಿಸುತಲೆಂದನೇಕೆ ತಾ । ಮನದಿ ದುಃಖಿಪುದಿನ್ನು ಬರಿದೆ ॥ ಕನಕಾದ್ರಿಚಾಪನ ಭಜಿಸಿ ಮೆಚ್ಚಿಸಿ ಮತ್ತೆ । ವನಚರನನು ಗೆಲ್ವೆನೆಂದು ॥ ೪ ॥

ವಾರ್ಧಿಕ

ನರನಿಂತೆನುತ ಮಳಲೊಳಯ್ದೆ ಶಿವಲಿಂಗಮಂ । ವಿರಚಿಸುತ ಭಕ್ತಿ ಯಿಂದಾಗಮೋಕ್ತಂಗಳಿಂ । ಪರಿಪರಿಯ ಪತ್ರಪುಷ್ಪಂಗಳಿಂ ಪೂಜಿಸಿ ಪ್ರದಕ್ಷಿ ಣೆಯ ಗೆಯ್ದು ಬಳಿಕ ॥ ಎರಗಿ ಪ್ರಾರ್ಥಿಸುತೆಂದನೆಲೆ ದೇವನೆನ್ನನೀ । ದುರುಳ ಶಬರಂ ಗೆಲುವನಿನ್ನು ನಿನ್ನನು ನಂಬಿ । ದರಿಗಪಜಯಂ ಬಪ್ಪುದುಂಟೆ ಲೋಕ ದೊಳೆಂದು ಮುಗುಳೆರಗುತಿಂತೆಂದನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳೆ

ಈಶ ಲಾಲಿಸು ಬದಲು ಮಾತೇ । ಕೀ ಶಬರನನು ಗೆಲುವ ಶಕ್ತಿಯ । ನೋಸರಿಸದಿತ್ತೆನ್ನ ರಕ್ಷಿಪು । ದೀ ಸಮಯದಿ ॥ ೧ ॥ ಎಂದು ಪುನರಪಿ ಲಿಂಗ ವನು ಬಲ । ಬಂದು ನಮಿಸಿಯೆ ಧೈರ್ಯದಿಂದಲಿ । ನಿಂದು ಕೋಪದಿ ಭುಜವನೊದರಿಸು । ತಂದು ನುಡಿದ ॥ ೨ ॥ ಫಡ ಫಡೆಲವೊ ಕಿರಾತ ಕೇಳ್ ನಿ । ನ್ನೊಡಲ ಬಗಿವೆನು ಮೃಡನ ಬಲದಲಿ । ಬಿಡುವವನೆ ನೀನಡಗಿದರು ನಿ । ಲ್ಲಡಿ ಮಿಡುಕದೆ ॥ ೩ ॥

ಭಾಮಿನಿ

ಕಾಣಬಹುದೋ ಶಬರ ನಿನ್ನಯ । ಪ್ರಾಣವೆನ್ನಾಧೀನವರಿಯಾ । ಸ್ಥಾಣುವಿನ ಬಲುಹಾಯ್ತು ಹಿಂಡುವೆನೀಗ ನಿನ್ನಸುವ ॥ ಗೋಣನರಿವೆನು ಮಿಡುಕಿದರೆ ನಿ । ನ್ನಾಣೆ ಬಾ ಸಮ್ಮುಖಕೆ ಹಾಣಾ । ಹಾಣಿಗನುವಾಗೆನುತ

Scanned by CamScanner

ಮಂಜು ಮುಸುಕಿದಡೇನು ಪರ್ವತ ।
ವವೆಯಿಕ್ಕದೆ ನಿರೀಕ್ಷಿಸಿದ ॥ ೧ ॥ ವೆಂಜಲಿಸುವದೆ ವಡಬಶಿಖಿ ನನೆವುದೆ
ನಂಜುವುದೆ ಹಾಲಾಹಲವ ನೊಣ । ಕುಂಜರನು ನರ ಶರದ
ತುಷಾರದಲಿ ॥ ಕಂಜನಾಳದಿ ಕಟ್ಟುವಡೆವುದೆ । ಜಂಜುವಳೆಯಲಿ ಜಾಹ್ನವೀಧರನಳುಕುವನೆಯೆಂದ ॥ ೨ ॥
ಜೋಡಿಯ । ಜಂಜುವಳೆಯಲಿ ಜಾಹ್ನವೀಧರನಳುಕುವನೆಯೆಂದ ॥ ೨ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎನುತ ನೋಡಲು ಲಿಂಗಕಿರಿಸಿ । ರ್ದನಿತು ಕುಸುಮಗಳಿರಲಿಕಾ
ವ್ಯಾ । ಧನ ಶಿರಸ್ಸಿಲಿ ಕಂಡು ಬೆರಗಿನ । ಮನದೊಳೆಂದ ॥ ೧ ॥ ನರನು
ಯೋಚಿಸುತೇನಿದಚ್ಚರಿ । ಪರಿಕಿಸುವೆನಿನ್ನೊಮ್ಮೆ ತಾನೆನು । ತಿರದೆ ನಿರ್ಮಾ
ಲ್ಯಂಗಳನು ಬೇ । ರಿರಿಸಿ ಮಗುಳೆ ॥ ೨ ॥

ಭಾಮಿನಿ

ಅರಸ ಕೇಳೈ ಬದಲು ಸುಮವನು । ನರನು ತಂದತಿಭಕ್ತಿಯಲಿ ಶಂ ।
ಕರ ನಮೋಯೆಂದರ್ಚಿಸಿದನಾ ಮಳಲಲಿಂಗವನು ॥ ಪರಮಪಾವನಮೂರ್ತಿ
ನೀನು । ದ್ಧರಿಸು ತನ್ನನೆನುತ್ತಲೆರಗಿದು । ತಿರುಗಿ ನಿಂದನು ಮತ್ತೆ ನೋಡಿದನಾ
ಕಿರಾತನನು ॥ ೧ ॥ ಪರಿಕಿಸಿದನವನುತ್ತಮಾಂಗದಿ । ನರನು ತಾನರ್ಚಿಸಿದ
ಸುಮವನು । ಮರಳಿ ಕಂಡನು ಸುಮಗಳಿಲ್ಲದ ಬರಿಯ ಲಿಂಗವನು ॥ ಅರಿದ
ನನಿತರ ಮೇಲೆ ಸರ್ವೇ । ಶ್ವರ ಸನಾತನೀತನೆಂಬುದ । ನಿರದೆ ಮನದಲಿ
ಮರುಗುತಾತಂ ತನ್ನೊಳಿಂತೆಂದ ॥ ೨ ॥

ರಾಗ ಕಾಂಭೋಜ ಝಂಪೆತಾಳ

ಹರ ಹರಾ ಸಾಕ್ಷಾತ್ ಪರಮೇಶನಿವನು ದಿಟ । ಮರಿಯದಾದೆನು
ಮರವೆಯಿಂದ ॥ ನಿರಶನದಿ ಪಿತ್ತ ತಲೆಗೇರಿ ಭ್ರಮೆಯಾಯ್ತು ಗಡ । ಮರುಳ
ರಾರ್ ಜಗದೊಳೆನ್ನಂತೆ ॥ ೧ ॥ ಎಸೆದ ಬಾಣಗಳೊಳೆಲ್ಲವ ತರಿದನುರು
ಮಂತ್ರ । ವಿಶಿಖವನು ನುಂಗಿದನು ಧನುವ ॥ ನಸುನಗುತ ಕೊಂಡನಸಿಯನು
ಸೆಳೆದನನಿತನೀ । ಕ್ಷಿಸಿ ತಿಳಿಯದಾದೆ ಹಮ್ಮಿನಲಿ ॥ ೨ ॥ ಅನಘನೆನ್ನನು
ಪರೀಕ್ಷಿಸಲೆಂದು ಶಬರರೂ । ಪನು ತಾಳಿ ಬಂದನೆಂಬುದನು ॥ ಮನದೊಳರಿ
ಯದೆ ಮೂದಲಿಸಿ ಹೊಕ್ಕು ಹೆಣಗಿದೆನು । ಘನ ಮದಾಂಧತೆಯಿಂದಲಕಟ ॥
॥ ೩ ॥ ಏಕೆ ಕಿಟೆಯುಯ್ತೆಂದುದೇಕೆ ನಾ ಸೆಣಸಿದೆನೊ । ಈ ಕಿರಾತನೊಳು
ಘನ ಮದದಿ ॥ ಕಾಕುತನವಾಯ್ತು ತನ್ನಿಂದೆನುತ 'ಮರುಗಿದನು । ಪಾಕ
ಶಾಸನಸೂನು ಭಯದಿ ॥ ೪ ॥

ಕಂದ

ಇಂತಳುತಿಹ ಪಾರ್ಥನನುಂ । ಕಂತುಹರಂ ಕಾಣುತಯ್ದೆ ಕಾರುಣ್ಯ
ದೊಳುಂ ॥ ತಾಂ ತಳುವದೆ ಪಂಚಾನನ । ನಿಂತೆಂಬುದ ತಾನೆ ತೋರಿದನಾ
ನರಗಂ ॥ ೧ ॥

ವಾರ್ಧಿಕ

ಅರಸ ಕೇಳಿಂತಭವನುಂ ಸನಕನಾರದಾ । ದ್ಯರಿಗಗೋಚರಮಾದ
ಪೂರ್ಣತರರೂಪದಿಂ । ಗಿರಿಜಾತೆಸಹಿತಮತಿ ಭಾಸುರಾನ್ವಿತಮಾಗಿ ಗೋಪ
ತಿಯನೇರ್ದ ಬಳಿಕ ॥ ವರ ವೀರಭದ್ರಾದಿ ಪ್ರಮಥಪರಿವಾರನಾ । ಗಿರೆ
ಕಂಡು ನಾಕದೊಳ್ ಪಾರ್ಥಂ ಕೃತಾರ್ಥನೆಂ । ದಿರದೆ ದುಂದುಭಿ ಮೊಳಗಲಿತ್ತಂ
ನರಂ ಕಾಣುತೆರಗಿದಂ ಭಕ್ತಿಯಿಂದ ॥ ೧ ॥ ಜಯ ಪಂದ್ಯಜನಪೋಷ ಜಯ
ಸರ್ಪಭೂಷ ಜಯ । ಜಯ ಶೈಲತನುಜೇಶ ಜಯ ಭವವಿನಾಶ ಜಯ ।
ಜಯ ಸಚ್ಚಿದಾನಂದ ಜಯ ಪ್ರಮಥವೃಂದ ಜಯ ಜಯ ಜಯ ಕಪಾಲ
ಮಾಲ ॥ ಜಯ ಸುಮನಸೋದ್ಧಾರ ಜಯ ದುರಿತದೂರ ಜಯ । ಜಯ
ಮೌನಿಕುಲರಕ್ಷ ಜಯ ದಕ್ಷಶಿಕ್ಷ ಜಯ । ಜಯ ಜಯತು ಭಸ್ಮಾಂಗ ಜಯ
ಮಹಾಲಿಂಗ ಜಯ ಜಯ ಜಯೆಂದೆರಗಿರ್ದನು ॥ ೨ ॥

ರಾಗ ಭೈರವಿ ಝಂಪೆತಾಳ

ಇಂತೆರಗಿ ನುತಿಸುತಿಹ । ಕೌಂತೇಯನೆಡೆಗೆ ಬಂ । ದಂತರಾತ್ಮಕನಧಿಕ ।
ಸಂತೋಷದಿಂದ ॥ ೧ ॥ ಶಿರವ ಮೃದುಹಸ್ತದಲಿ । ಭರದಿಂದ ಪಿಡಿದೆತ್ತಿ ।
ನರಗೆಂದನಭವನತಿ । ಕರುಣದಿಂದೊಲಿದು ॥ ೨ ॥ ಘನ ಪರಾಕ್ರಮಿ ಕೇಳು ।
ಮನದಿ ಬೆದರದಿರಿನ್ನು । ಕಿನಿಸಿಲ್ಲವೆಮಗೆ ಗುಹ । ಗಣಪತಿಗಳಾಣೆ ॥ ೩ ॥
ತವ ಚಾಪ ಖಡ್ಗ ಶರ । ವಿವೆ ಮುನ್ನ ಕೊಳ್ಳೆನುತ । ಲವಗಿತ್ತು ಮಗುಳೆಂದ ।
ಶಿವನು ನರನೊಡನೆ ॥ ೪ ॥ ನಿನ್ನ ಮೂದಲೆಯೆನಗೆ । ಸನ್ನುತ ನಮಸ್ಕಾರ ।
ನಿನ್ನ ಘುರವರ್ಚನೆಗ । ಳೆನ್ನು ನೀ ಮನದಿ ॥ ೫ ॥ ಬೆಚ್ಚದಿರು ಬೆದರದಿರು ।
ಮೆಚ್ಚಿದೆನು ಮನದಿರವ । ನುಚ್ಚರಿಪುದೆಂದನಾ । ಸಚ್ಚಿದಾತ್ಮಕನು ॥ ೬ ॥

ಕಂದ

ಎಂದಭವನ ನುಡಿಯಂ ಕೇ । ಳ್ದಂದಾ ನರನಯ್ದೆ ತೋಷಜಲಧಿಯೊ
ಳಾಳ್ದಂ ॥ ನಿಂದಾ ಚಿನ್ಮಯನೊಡನಿಂ । ತೆಂಪಂ ಭಕ್ತಿಯೊಳತಿಸಂಭ್ರಮ
ದಿಂದಾಗಂ ॥ ೧ ॥

Scanned by CamScanner

ರಾಗ ಸೌರಾಷ್ಟ್ರ ತ್ರಿವುಡೆತಾಳ

ಹರನೆ ಲಾಲಿಸು ನಿನ್ನ ನಂಬಿದ । ನರರಿಗೆಲ್ಲಿಯು ಭೀತಿ ಚಿನ್ಮಯ । ನರಿಯೆಯಾ ನೀನೆನ್ನ ಬಯಕೆಯ । ನೊರೆವುದೇನು ॥ ೧ ॥ ಶರಣನೆಂಬೀ ಪ್ರೇಮವುಳ್ಳಡೆ । ಕರುಣಿಸೈ ಪಾಶುಪತಶರವನು । ಮರಳಿ ಮಾತೇನೆನುತ ಪಾದ । ಕ್ಕೆರಗೆ ಕಂಡು ॥ ೨ ॥ ನುಡಿಗೆ ತಪ್ಪುವುದುಂಟೆ ಮಗನೇ । ಕೊಡುವೆ ನೀ ಬೇಡಿದ ಶರಂಗಳ । ತಡೆಯದೀಗೆಂದೆನುತಲಪ್ಪಿದ । ಪೃಡನು ನರನ ॥ ೩ ॥

ವಾರ್ಧಿಕ

ಅರಸ ಕೇಳಿಂತಭವನೆಂದುದಂ ಕೇಳುತಂ । ನರನಧಿಕ ಭಕ್ತಿಯಿಂ ಮಿಂದು ಶುಚಿಯಾಗಿ ಪುರ । ಹರನಡಿಗೆ ಬಂದು ತಲೆವಾಗಿ ಕಯ್ ಮುಗಿದು ನಿಂದಿರುವ ಪಾರ್ಥನ ಕಾಣುತ ॥ ಗಿರಿಶನತಿಶಯದೊಳ್ ರಹಸ್ಯದಿಂದಾಗಲ । ಕರೆದಿತ್ತು ಪಾಶುಪತ ಶರದ ಪರಿಯಂ ತಿಳುಹಿ ಮಂತ್ರೋಪದೇಶಮಂ । ಶರವನುಂ ಕೊಟ್ಟನಿನ್ನೇಸು ಸುಕೃತನೊ ಪಾರ್ಥನು ॥ ೧ ॥

ಭಾಮಿನಿ

ಹರನು ಪಾಶುಪತಾಸ್ತ್ರವನು ಸಿತ । ತುರಗಗೀಯಲು ಕಾಣುತಭ್ರದಿ । ಸುರರು ಸನ್ಮತದಿಂದ ಸುರಿದರು ಪುಷ್ಪವೃಷ್ಟಿಗಳ ॥ ಅರಸ ಕೇಳಿತ್ತಲು ಮಹೇಶನು । ನರನ ಮನ್ನಿಸಿ ಮೆಯ್ದಡವಿ ಘನ । ಕರುಣದಿಂದೀಕ್ಷಿಸುತ ನುಡಿದನು ಮಧುರವಚನದಲಿ ॥ ೧ ॥

ರಾಗ ಮಧುಮಾಧವಿ ತ್ರಿವುಡೆತಾಳ

ತರುಣ ಕೇಳೈ ಪೂರ್ವದಲಿ ನೀ । ನರಋಷಿಯು ಮಗುಳೆಮಗೆ ಭಕ್ತನು । ಪಿರಿದು ಮೆಚ್ಚಿದೆ ನಿನಗೆ ನೀನಿ । ನ್ನರಿಗಳನು ಜಯಿಸೆನ್ನುತ ॥ ಹರನು ಮಗುಳೆ ॥ ೧ ॥ ಅರುಹಿ ಮತ್ತಾ ಗಿರಿಶನಗಜೆಯ । ಕರೆದು ನುಡಿದನು ಕಾಂತೆ ಕೇಳ್ ನೀ। ಶರಣನನು ಪೊರೆಯೆನಲು ವಧುಪದ । ಕೆರಗಿ ನುತಿಸಿದ ಶಿವೆಯನು ॥ ಭಕ್ತಿಯಿಂದ ॥ ೨ ॥ ಚರಣಕಾನತನಾಗಿ ನುತಿಸುವ । ನರನನೀಕ್ಷಿಸುತುಮೆಯು ಪ್ರೇಮದಿ । ಮುರಹರನ ಮಯ್ದುನನೆ ಬಾ ಸ । ಚ್ಚರಿತ ನೀ ಬಾರೆನುತಲೆ ॥ ತವಕದಿಂದ ॥ ೩ ॥ ಕರೆದು ಕರುಣದೊಳಂಜನಾಸ್ತ್ರವ । ನಿರದೆ ಕೊಟ್ಟದರಂದವೆಲ್ಲವ । ನರುಹಲಗಜೆಗೆ ಮಣಿಯುತಲೆ ಮ । ತ್ತೆರಗಿದನು ತತ್ಸತರಿಗೆ ॥ ಪಾರ್ಥ ಮುದದಿ ॥ ೪ ॥

ಕಂದ

ಕರಿಮುಖಷಣ್ಮುಖರುಂ ಘನ । ಹರುಷದಿ ಪಿಡಿದೆತ್ತುತ ತಕ್ಕಯ್ಸಿ

ಪಾರ್ಥನನುಂ ॥ ಅರಿಗಳನುಂ ಜಯಿಸೆನ್ನುತ । ಉರುತರ ಮಂತ್ರೋಪದೇಶವಿತ್ತುಪಚರಿಸಿದರ್ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಮಗುಳೆ ಕಯ್ ಮುಗಿದು ನಿಂದಿರುವ ಪಾರ್ಥನ ನೋಡಿ । ಮೃಗಧರ ತೋಷದಲಿ ॥ ಮಗನೆ ನೀ ನಡೆ ಶಕ್ರಪುರಕೆ ಲೇಸಹುದು ಕಾ । ರ್ಯಗಳೆಲ್ಲ ನಿನಗೆ ಮುಂದೆ ॥ ೧ ॥ ಹರಿಯು ಮಿತ್ರನು ನಮಗವನೆನ್ನ ಸಮಬಲ । ನರಿತಿಪ್ಪುದವನ ನೀನು ॥ ಮರೆಯದಿರಾತನನೆಂದು ಮೆಯ್ದಡವಿ ಶಂ । ಕರನಂತರ್ಧಾನನಾದ ॥ ೨ ॥ ಹರನು ಗಣರುಸಹ ತೆರಳಲಿತ್ತಲು ಸುರ । ರೆರೆಯ ಸುಕುಮಾರನು ॥ ಮರುಗುತ್ತ ಶಿವನ ಪಾದವನಗಲಿದೆನೆಂಬ । ಪರಿಗೆ ಚಿಂತಿಸುತಿರ್ದನು ॥ ೩ ॥

ಭಾಮಿನಿ

ಜನಪ ಕೇಳಾ ಸಮಯದೊಳಗ । ರ್ಜುನನ ಕಾಂಬರ್ತಿಯಲಿ ಬಂದರು । ವನಧಿನಾಥ ಕುಬೇರ ಯಮ ನಿಋತಿಯು ಮೊದಲಾಗಿ ॥ ಘನತರೋತ್ಸಹದಿಂದಲಿಂದ್ರನು । ತನುಜನೆಡೆಗಯ್ತರಲು ಕಾಣುತ । ಲನಿಬರಿಗೆ ಮಣಿದನು ಧನಂಜಯನಧಿಕ ಭಕ್ತಿಯಲಿ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಚರಣಕೆರಗಿದ ನರನನಪ್ಪುತ । ಸುರಪನೆಂದನು ಮಗನೆ ಸೇರಿತು । ಹರನ ಶರ ನಿನಗಿದಿರದಾರೈ । ಧರೆಯೊಳಿನ್ನು ॥ ೧ ॥ ಆ ಶರಕೆ ಬಳುವಳಿಯ ಕೊಡುವೆ ವಿ । ಲಾಸದಿಂ ಕೊಳ್ಳೆನುತಲಮರಾ । ಧೀಶನೈಂದ್ರಾಸ್ತ್ರವನು ಕೊಟ್ಟನು । ತೋಷದಿಂದ ॥ ೨ ॥ ವರುಣ ವಾಯು ಕುಬೇರರಸ್ತ್ರವ । ನರನಿಗಿತ್ತರು ಮಗುಳೆ ಸುಮನಸ । ರೆರೆಯನೆಂದನು ಕರೆದು ಪಾರ್ಥನ । ಕರುಣದಿಂದ ॥ ೩ ॥ ತರುಣ ಕೇಳೈ ತಪವ ವಿರಚಿಸಿ । ನಿರಶನದಿ ನೀ ದಣಿದೆ ನಮ್ಮಯ । ಪುರಕೆ ಬಂದೀ ಬಳಲಿಕೆಯ ಪರಿ । ಹರಿಪುದಿನ್ನು ॥ ೪ ॥ ಕಳುಹಿಸುವೆವು ವರೂಥವನು ಮಾ । ತಲಿಯೊಡನೆ ನೀ ಬಪ್ಪುದೆನುತಲೆ । ತಿಳುಹಿ ಮಗನನು ಪರಸಿ ಸ್ವರ್ಗಕೆ । ನಲವಿನಿಂದ ॥ ೫ ॥

ಕಂದ

ಸುರಪತಿ ದಿಕ್ಪಾಲಕರ್ಸಹ । ತೆರಳಲು ತೋಷದಿ ನಾಕಕೆ ಮುದದಿಂ ಸುರಪಂ ॥ ಕರೆದಾ ಮಾತಲಿಗರುಹಿದ । ನರನಿರ್ದೆಡೆಗತಿ ಬೇಗದಿ ಪೋಪುದುಯೆನುತಂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳೆ

ಹರನೆ ಲಾಲಿಸು ನಿನ್ನ ನಂಬಿದ । ನರರಿಗೆಲ್ಲಿಯ ಭೀತಿ ಚಿನ್ಮಯ । ನರಿ
ಯೆಯಾ ನೀನೆನ್ನ ಬಯಕೆಯ । ನೊರೆವುದೇನು ॥ ೧ ॥ ಶರಣನೆಂಬೀ ಪ್ರೇಮ
ಯೆಯಾ ನೀನೆನ್ನ ಬಯಕೆಯ । ನೊರೆವುದೇನು ॥ ೧ ॥ ಶರಣನೆಂಬೀ ಪ್ರೇಮ

ರಾಗ ಸೌರಾಷ್ಟ್ರ ತ್ರಿವುಡೆತಾಳೆ

ಹರನೆ ಲಾಲಿಸು ನಿನ್ನ ನಂಬಿದ । ನರರಿಗೆಲ್ಲಿಯ ಭೀತಿ ಚಿನ್ಮಯ । ನರಿ
ಯೆಯಾ ನೀನೆನ್ನ ಬಯಕೆಯ । ನೊರೆವುದೇನು ॥ ೧ ॥ ಶರಣನೆಂಬೀ ಪ್ರೇಮ
ವುಳ್ಳಡೆ । ಕರುಣಿಸೈ ಪಾಶುಪತಶರವನು । ಮರಳಿ ಮಾತೇನೆನುತ ಪಾದ ।
ಕ್ಕೆರಗೆ ಕಂಡು ॥ ೨ ॥ ನುಡಿಗೆ ತಪ್ಪುವುದುಂಟೆ ಮಗನೇ । ಕೊಡುವೆ ನೀ
ಬೇಡಿದ ಶರಂಗಳ । ತಡೆಯದೀಗೆಂದೆನುತಲಪ್ಪಿದ । ನೃಡನು ನರನ ॥ ೩ ॥

ವಾರ್ಧಿಕ

ಅರಸ ಕೇಳಿಂತಭವನೆಂದುದಂ ಕೇಳುತಂ । ನರನಧಿಕ ಭಕ್ತಿಯಿಂ
ಮಿಂದು ಶುಚಿಯಾಗಿ ಪುರ । ಹರನಡಿಗೆ ಬಂದು ತಲೆವಾಗಿ ಕಯ್ ಮುಗಿದು
ನಿಂದಿರುವ ಪಾರ್ಥನ ಕಾಣುತ ॥ ಗಿರಿಶನತಿಶಯದೊಳ್ ರಹಸ್ಯದಿಂದಾಗಲ ।
ಶರದ ಪರಿಯಂ ತಿಳುಹಿ ಮಂತ್ರೋಪದೇಶಮಂ । ಕರೆದಿತ್ತು ಪಾಶುಪತ
ಶರವನುಂ ಕೊಟ್ಟನಿನ್ನೇಸು ಸುಕೃತನೊ ಪಾರ್ಥನು ॥ ೧ ॥

ಭಾಮಿನಿ

ಹಡನು ಪಾಶುಪತಾಸ್ತ್ರವನು ಸಿತ । ತುರಗಗೀಯಲು ಕಾಣುತಭೃದಿ ।
ಸುರರು ಸನ್ಮತದಿಂದ ಸುರಿದರು ಪುಷ್ಪವೃಷ್ಟಿಗಳ ॥ ಅರಸ ಕೇಳಿತ್ತಲು ಮಹೇ
ಶನು । ನರನ ಮನ್ನಿಸಿ ಮೆಯ್ದಡವಿ ಘನ । ಕರುಣದಿಂದೀಕ್ಷಿಸುತ ನುಡಿದನು
ಮಧುರವಚನದಲಿ ॥ ೧ ॥

ರಾಗ ಮಧುಮಾಧವಿ ತ್ರಿವುಡೆತಾಳೆ

ತರುಣ ಕೇಳೈ ಪೂರ್ವದಲಿ ನೀ । ನರಋಷಿಯು ಮಗುಳೆಮಗೆ ಭಕ್ತನು ।
ಪಿರಿದು ಮೆಚ್ಚಿದೆ ನಿನಗೆ ನೀನಿ । ನ್ನರಿಗಳನು ಜಯಿಸೆನ್ನುತ ॥ ಹರನು
ಮಗುಳೆ ॥ ೧ ॥ ಅರುಹಿ ಮತ್ತಾ ಗಿರಿಶನಗಜೆಯ । ಕರೆದು ನುಡಿದನು ಕಾಂತೆ
ಕೇಳ್ ನೀ । ಶರಣನನು ಪೊರೆಯೆನಲು ವಧುಪದ । ಕೆರಗಿ ನುತಿಸಿದ ಶಿವೆಯನು ॥
ಭಕ್ತಿಯಿಂದ ॥ ೨ ॥ ಚರಣಕಾನತನಾಗಿ ನುತಿಸುವ । ನರನನೀಕ್ಷಿಸುತುಮೆಯು
ಪ್ರೇಮದಿ । ಮುರಹರನ ಮಯ್ದುನನೆ ಬಾ ಸ । ಚ್ಚರಿತ ನೀ ಬಾರೆನುತಲೆ ॥
ತವಕದಿಂದ ॥ ೩ ॥ ಕರೆದು ಕರುಣದೊಳಂಜನಾಸ್ತ್ರವ । ನಿರದೆ ಕೊಟ್ಟದರಂದ
ವೆಲ್ಲವ । ನರುಹಲಗಜೆಗೆ ಮಣಿಯುತಲೆ ಮ । ತ್ತೆರಗಿದನು ತತ್ಸುತರಿಗೆ ॥
ಪಾರ್ಥ ಮುದದಿ ॥ ೪ ॥

ಕಂದ

ಕರಿಮುಖಷಣ್ಮುಖರುಂ ಘನ । ಹರುಷದಿ ಪಿಡಿದೆತ್ತುತ ತಕ್ಕಯ್ಸಿ

ಪಾರ್ಥನನುಂ ॥ ಅರಿಗಳನುಂ ಜಯಿಸೆನ್ನುತ । ಉರುತರ ಮಂತ್ರೋಪದೇಶ
ವಿತ್ತುಪಚರಿಸಿದರ್ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಮಗುಳೆ ಕಯ್ ಮುಗಿದು ನಿಂದಿರುವ ಪಾರ್ಥನ ನೋಡಿ । ಮೃಗಧರ
ತೋಷದಲಿ ॥ ಮಗನೆ ನೀ ನಡೆ ಶಕ್ರಪುರಕೆ ಲೇಸಹುದು ಕಾ । ರ್ಯಗಳೆಲ್ಲ
ನಿನಗೆ ಮುಂದೆ ॥ ೧ ॥ ಹರಿಯು ಮಿತ್ರನು ನಮಗವನೆನ್ನ ಸಮಬಲ । ನರಿ
ತಿಪ್ಪುದವನ ನೀನು ॥ ಮರೆಯದಿರಾತನನೆಂದು ಮೆಯ್ದಡವಿ ಶಂ । ಕರ
ನಂತರ್ಧಾನನಾದ ॥ ೨ ॥ ಹರನು ಗಣರುಸಹ ತೆರಳಲಿತ್ತಲು ಸುರ । ರೆರೆಯ
ಸುಕುಮಾರನು ॥ ಮರುಗುತ್ತ ಶಿವನ ಪಾದವನಗಲಿದೆನೆಂಬ । ಪರಿಗೆ ಚಿಂತಿ
ಸುತಿರ್ದನು ॥ ೩ ॥

ಭಾಮಿನಿ

ಜನಪ ಕೇಳಾ ಸಮಯದೊಳಗ । ರ್ಜುನನ ಕಾಂಬರ್ತಿಯಲಿ ಬಂದರು ।
ವನಧಿನಾಥ ಕುಬೇರ ಯಮ ನಿರ್ಋತಿಯು ಮೊದಲಾಗಿ ॥ ಘನತರೋತ್ಸಹ
ದಿಂದಲಿಂದ್ರನು । ತನುಜನೆಡೆಗಯ್ತರಲು ಕಾಣುತ । ಲನಿಬರಿಗೆ ಮಣಿದನು
ಧನಂಜಯನಧಿಕ ಭಕ್ತಿಯಲಿ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳೆ

ಚರಣಕೆರಗಿದ ನರನನಪ್ಪುತ । ಸುರಪನೆಂದನು ಮಗನೆ ಸೇರಿತು ।
ಹರನ ಶರ ನಿನಗಿದಿರದಾರೈ । ಧರೆಯೊಳಿನ್ನು ॥ ೧ ॥ ಆ ಶರಕೆ ಬಳುವಳಿಯ
ಕೊಡುವೆ ವಿ । ಲಾಸದಿಂ ಕೊಳ್ಳೆನುತಲಮರಾ । ಧೀಶನೈಂದ್ರಾಸ್ತ್ರವನು
ಕೊಟ್ಟನು । ತೋಷದಿಂದ ॥ ೨ ॥ ವರುಣ ವಾಯು ಕುಬೇರರಸ್ತ್ರವ । ನರನಿ
ಗಿತ್ತರು ಮಗುಳೆ ಸುಮನಸ । ರೆರೆಯನೆಂದನು ಕರೆದು ಪಾರ್ಥನ । ಕರುಣ
ದಿಂದ ॥ ೩ ॥ ತರುಣ ಕೇಳೈ ತಪವ ವಿರಚಿಸಿ । ನಿರಶನದಿ ನೀ ದಣಿದೆ
ನಮ್ಮಯ । ಪುರಕೆ ಬಂದೀ ಬಳಲಿಕೆಯ ಪರಿ । ಹರಿಪುದಿನ್ನು ॥ ೪ ॥ ಕಳುಹಿ
ಸುವೆವು ವರೂಥವನು ಮಾ । ತಲಿಯೊಡನೆ ನೀ ಬಪ್ಪುದೆನುತಲೆ । ತಿಳುಹಿ
ಮಗನನು ಪರಸಿ ಸ್ವರ್ಗಕೆ । ನಲವಿನಿಂದ ॥ ೫ ॥

ಕಂದ

ಸುರಪತಿ ದಿಕ್ಪಾಲಕರ್ಸಹ । ತೆರಳಲು ತೋಷದಿ ನಾಕಕೆ ಮುದದಿಂ
ಸುರಪಂ ॥ ಕರೆದಾ ಮಾತಲಿಗರುಹಿದ । ನರನಿರ್ದೆಡೆಗತಿ ಬೇಗದಿ ಪೋಪುದು
ಯೆನುತಂ ॥ ೧ ॥

Scanned by CamScanner

ರಾಗ ಕಾಂಭೋಜ ಝಂಪೆತಾಳ

ಸುರಪತಿಯ ನೇಮದಲಿ ಹರುಷದಿಂ ಮಾತಲಿಯು । ವರ ವರೂಥವು ಸಹಿತಲಂದು ॥ ಧರಣಿಗಯ್ತರುವುದನು ನರನು ಕಂಡೇನಿಗ । ಚ್ಚರಿಯೆಂದು ಬೆರಗಿನಿಂದಿರ್ದ ॥ ೧ ॥ ಸುರಪಸೂತನು ರಥವನಿಳಿದು ಪಾರ್ಥನ ಕರೆದು । ಹರುಷದಿಂದಿಂತೆಂದನವಗೆ ॥ ಬೆರಗುವಡಲೇಕಿನಿತು ಧುರವಿಜಯನಾಗಿ ನೀ । ತೆರಳೆನುತ್ತೆಂದನವನೊಡನೆ ॥ ೨ ॥ ನೀನೆ ಕಲಿ ಪಾರ್ಥನೆಂಬತಿಧೀರನಹುದಿನ್ನು । ಮಾನವರು ಹಲವು ಯಾಗವ ಮಾಡಿದರು ಸಾನುರಾಗದೊಳೇರು ರಥವ ॥ ೩ ॥ ಪಾಕಶಾಸನ ನಿನ್ನ ಕರೆದು ಕಾಣ । ರೇನೆಂಬೆ ನಿನ್ನ ಪುಣ್ಯವನು ॥ ೩ ॥ ನಾಕ ಕಯ್ವಶವಾದುದಿನ್ನು ತಾರೆಂದೆನ್ನ । ತಾ ಕಳುಹಿಸಿದನು ನಿನ್ನೆಡೆಗೆ ॥ ೪ ॥ ಸುರಸೂತ ಸರಿಯುಂಟೆ ಮೂ । ಲೋಕದೊಳಗೆನಲು ನರ ನುಡಿದ ॥ ೪ ॥ ಹರನ ಕರು ಕೇಳು ನಾಕವದೆಲ್ಲಿ ನಾವೆಲ್ಲಿ । ನರರಿಗದು ಕಣ್ಗೆ ಗೋಚರವೆ ॥ ಹರನ ಕರುಣದಿ ಭಾಗ್ಯನಾದೆನೆಂದೆನುತಲಾ । ನರನೇರ್ದನಾ ಕನಕರಥವ ॥ ೫ ॥

ಭಾಮಿನಿ

ಜನಪ ಕೇಳಾ ಇಂದ್ರಕೀಲದ । ವನಕೆ ಕಯ್ ಮುಗಿದಲ್ಲಿರುವ ಮುನಿ। ಜನಕೆರಗಿ ಬೀಳ್ಕೊಂಡು ಪಾರ್ಥನು ಕುಳಿತು ರಥದೊಳಗೆ ॥ ಮನದಿ ಹರುಷಿಸಿ ನಡೆಸು ನೀ ಸ್ಯಂ । ದನವನೆನೆ ಮಾತಲಿಯು ಹಯಗಳ । ನನುವಿನಿಂ ಚಪ್ಪರಿಸಲಯ್ದಿದನಭ್ರಮಾರ್ಗದಲಿ ॥ ೧ ॥ ನರಗೆ ಬ್ರಹ್ಮಾಂಡದ ಮಹಾ ವಿ । ಸ್ತರವನೆಲ್ಲವ ತೋರುತಾ ಸುರ । ವರನ ಸಾರಥಿ ಬಂದ ನರಸಹಿತಮರಪುರವರಕೆ ॥ ಅರಸ ಕೇಳರ್ಜುನನ ಭಾಗ್ಯಕೆ । ಸರಿಯದಾವನು ನರರೊಳಗೆ ಶಂ । ಕರನ ಕರುಣದಿ ಕಂಡನಮರಾವತಿಯ ಸುಲಭದಲಿ ॥ ೧ ॥

ಕಂದ

ಫಲುಗುಣನಿಂತಾ ದಿವಿಜರ । ಪೊಳಲಂ ಕಂಡರ್ತಿಯಿಂದಲಾ ರಥದಿಂ ॥ ದಿಳಿದಭವನ ಧ್ಯಾನದೆ ಮಾ । ತಲಿಯೊಡನಾ ಪುರವನೀಕ್ಷಿಸುತಲಯ್ತಂದಂ ॥೧॥

ರಾಗ ರೇಗುಪ್ತಿ ತ್ರಿವುಡೆತಾಳ

ಅರಸ ಕೇಳರ್ಜುನನು ದಿವಿಜರ। ಪುರದ ಸಿರಿಯನು ಕಂಡು ಮನದಲಿ। ಹರುಷಗೊಳ್ಳುತ ಬೆರಗುದಾಳುತ । ಹಿರಿದು ಮೆಚ್ಚುತ ಶಿವ ಶಿವೆನ್ನುತ । ಬರಬರಲು ತನ್ಮಧ್ಯದಲಿ ಸುರ । ವರನ ಭವನ ವಿರಾಜಿಸಿರಲಾ। ನರನು ಮಾತಲಿವೆರಸಿ ತನ್ಮಂ । ದಿರವ ಪೊಕ್ಕನು ವೇಗದಿಂದಲಿ । ಮೋದದಿಂದ । ಬಹಳ ವಿ।

ನೋದದಿಂದ ॥ ೧ ॥ ಸುತನ ಬರವನು ಕಂಡು ಸುಮನಸ । ಪತಿಯು ವೇಗದಿ ಸಿಂಹಪೀಠವ । ನತಿ ಮುದದಲಿಳಿದಿದಿರು ಬಂದ । ಪ್ರುತ ಘನ ಸ್ನೇಹದಲಿ ಬಾರ । ಪ್ರತಿಮಬಲ ಬಾರೆಂದು ನರನನು । ಚಿತವಚನದಿಂ ಕರ ವಿಡಿದು ತಂ । ದತುಳ ಮೋಹದಿ ತನ್ನ ಕೆಲದಲಿ । ಶತಮುಖನು ಕುಳ್ಳಿರಿಸಿದನು ಬಲು । ಮೋದದಿಂದ । ಬಹಳ ವಿ । ನೋದದಿಂದ ॥ ೨ ॥

ಭಾಮಿನಿ

ಹರಿಹಯನ ಸಿಂಹಾಸನಾರ್ಧದಿ । ನರನು ಕುಳ್ಳಿರೆ ಕಂಡು ಸುರಕಿ । ನ್ನರ ಗರುಡ ಗಂಧರ್ವ ಮುಖ್ಯರು ತಮ್ಮತಮ್ಮೊಳಗೆ ॥ ನರರು ಶತಯಾಗದಲಿ ಸಾರ್ವರು । ಸುರಪತಿಯ ಗದ್ದುಗೆಯನಿದು ಹೊಸ । ಪರಿ ಪರೀಕ್ಷಿಸಬೇಕೆನುತ ನಡೆತಂದರೊಗ್ಗಿನಲಿ ॥ ೧ ॥

ವಾರ್ಧಿಕ

ಅರಸ ಕೇಳೀತೆರದೊಳಿಂದ್ರನೋಲಗಕಮರ । ಗರುಡಗಂಧರ್ವಚಾರಣ ಸಿದ್ಧ ಸಾಧ್ಯ ಕಿಂ । ಪುರುಷಗುಹ್ಯಕಯಕ್ಷ ವಸುಕಿನ್ನರಾದ್ಯರುಂ ನೆರೆದುಮೊತ್ತೊತ್ತೆಯಾಗಿ ॥ ಬರುವವರ್ಗಿಂಬಿಲ್ಲಮಿನ್ನು ಬರಲೀಸದಿರಿ । ಬರಗೊಡದಿರಲ್ಪ ಪುಣ್ಯರನೆಂದು ಗರ್ಜಿಸುವ । ಸುರರಿಂದ ಅಮರೇಂದ್ರನಂದಿನೊಡ್ಡೋಲಗದ ಪರಿಯನಿನ್ನೇಂ ಪೊಗಳ್ವೆನು ॥ ೧ ॥

ರಾಗ ಭೈರವಿ ಝಂಪೆತಾಳ

ನೆರೆದು ಸುಮನಸರೆಲ್ಲ । ಬೆರಗಾಗಿ ಪಾರ್ಥನನು । ಪರಿಕಿಸುತಲಿವನಾವ । ಘೋರೆಕುಮಾರಕನೊ ॥ ೧ ॥ ನುಸಿಗಳಿಳೆಯವದಿರೆಂ । ಬೊಸಗೆ ಸುರಲೋಕದಲಿ । ಪುಸಿಯಾಯಿತಿಂದಿನಲಿ । ವಸು ಮುಖ್ಯರುಗಳ ॥ ೨ ॥ ನಲವಿನಿಂ ದೀಕ್ಷಿಸಲು । ಚೆಲುವನಿವನಿವನ ಭುಜ । ಬಲಕೆ ಸರಿ ಭಟರು ಸುರ । ಕುಲದೊಳಿಲ್ಲೆನುತ ॥ ೩ ॥ ನೋಡುತ್ತ ಹಿಗ್ಗುತ್ತ । ಹಾಡುತ್ತ ಹರಸುತ್ತ । ಕೂಡಿದಮರೌಘ ಕೊಂ । ಡಾಡುತಿರಲಂದು ॥ ೪ ॥

ಕಂದ

ಇಂತಾ ಸಮಯದಿ ಪಾರ್ಥಂ । ಚಿಂತೆಯೊಳ್ ಮನಮರುಗುತ ಪಿತನಂ ನೋ ॥ ಳ್ಪಂತಭಾರ್ಗವದಿ ನಾಲ್ದೆಸೆ । ಯಂ ತಾಂ ತಳುವದೆ ಪರಿಕಿಸೆ ಸುರಪತಿ ನುಡಿದಂ ॥ ೧ ॥

Scanned by CamScanner

ರಾಗ ಸೌರಾಷ್ಟ್ರ ತ್ರಿವುಡೆತಾಳ

ಏನು ಫಲುಗುಣ ತಪಸಿನಿಂದಲಿ । ನೀನು ಬಲು ಬಳಲಿರ್ಪೆ ನುಡಿ ಯುದ । ಡೇನು ಕಾರಣ ನಮ್ಮೊಳಿಂತನು । ಮಾನವೇಕೆ ॥ ೧ ॥ ಎನಲು ಕೈಮುಗಿದೆಂದನೆನ್ನಯ । ಜನಕ ತಾ ಸುರಸಭೆಗೆ ಸಲ್ಲನು । ಯೆನುತಲಣ್ಣನೊ ಳೆಂದ ನಾರದ । ಮುನಿಪನಂದು ॥ ೨ ॥ ಧರಣಿಪತಿ ಧರ್ಮಜನು ರಾಜಾ । ಧ್ವರವ ಮಾಡಿದರೆನ್ನ ಬೊಪ್ಪನ । ಸುರರ ಸಭೆಯಲಿ ಕಾಣೆವಾವೆಡೆ । ವಿರ್ಪವು ಪಿತಗೆ ॥ ೩ ॥ ಹರನ ದಯದಲಿ ನಿಮ್ಮ ಲೋಕವ । ಪರಿಕಿಸಿದೆ ನಾನೆನ್ನ ತಂದೆಯು । ಕರೆಸಿ ತೋರ್ದಡೆ ಕಾಂಬೆ ನಿಮ್ಮಯ । ಕರುಣದಿಂದ ॥ ೪ ॥

ಭಾಮಿನಿ

ಎನಲು ಕರೆಸುವೆನೆಂದು ದೂತರ । ವಿನಯದಿಂ ತಾ ಕಳುಹಿ ಪಾರ್ಥನ । ಮನದಣಿಯೆ ಪೊಗಳುತ್ತಲಿರಲೀ ಚರರು ನಡೆತಂದು ॥ ಜನಪ ಪಾಂಡುವಿ ಗೆರಗಿ ತಂದರು । ತನುಜದರುಶನಕೆಂದು ಕಾಣು । ತ್ತನಿಮಿಷಾಧಿಪನೆನುತ ಲೆರಗಿದ ನರನು ಪಿತನಡಿಗೆ ॥ ೧ ॥ ಅಂದು ಪಾಂಡುನೃಪಾಲನನು ಸಾ । ನಂದದಲಿ ಕುಳ್ಳಿರಿಸಿ ಪಾರ್ಥನ । ನಂದು ಮನ್ನಿಸೆ ಸುರರು ನೋಡಲು ಸಭೆಯ ಸಂಭ್ರಮವ ॥ ಮುಂದಿಯನು ಹೊರತೆಗೆಸು ಬಾಗಿಲ । ನೆಂದೆನಲು ಮಿಗೆ ವಾರನಾರೀ । ವೃಂದ ಕವಿದುದು ಮನ್ಮಥನ ಕೂರ್ಗಣೆಗಳೆಂಬಂತೆ ॥ ೨ ॥

ರಾಗ ಮಾರವಿ ಏಕತಾಳ

ಲಾಲಿಸು ಭೂವರನಿಂದ್ರನು ಮೆರೆವೊ । ಡ್ಡೋಲಗದೊಗ್ಗಿನಲಿ ॥ ಬಾಲೆ ಯರಯ್ದಿತು ಪರಿಮಳವನು ಸುರ । ಜಾಲಕೆ ಬೀರುತಲಿ ॥ ೧ ॥ ಕಂಕಣಗಳು ಝೇಂಕರಿಸುತ ಕಾಂಚೀ । ಕಿಂಕಿಣಿ ರವವೆಸೆಯೆ ॥ ಪಂಕಜದಂದದಿ ಮೊಲೆ ಯಲುಗಲ್ ಅಳಿ । ಝೇಂಕಾರದೊಳುಲಿಯೆ ॥ ೨ ॥ ಸುಳಿಗುರುಳಿನ ತಳತಳಿ ಸುವ ಕದಪಿನ । ಹೊಳೆಹೊಳೆವಕ್ಷಿಗಳ ॥ ಕಲಶಕುಚದ ಕೋಮಲೆಯರು ಬಂದರು । ಬಲವೈರಿಯ ಸಭೆಗೆ ॥ ೩ ॥

ವಾರ್ಧಿಕ

ಅರಸ ಕೇಳ್ ಮೇನಕೆ ತಿಲೋತ್ತಮೆ ಘೃತಾಚಿ ಸು । ಸ್ವರೆ ರಂಭೆ ಚೈತ್ರರಥೆ ಚಾರುವಕ್ತ್ರೆ ಸುಕೇಶಿ । ಸುರಭಿಗಂಧಿನಿ ವರೂಥಿನಿ ಚಿತ್ರಲೇಖೆ ಯೂರ್ವಶಿ ಸುರಸೆ ಮುಖ್ಯರಾದ ॥ ಪರಿಪರಿಯ ಪೆಸರುಳ್ಳ ಸುರವಾರನಾರಿ ಯರ್ । ನೆರೆದರಂದಪರಿಮಿತವಾಗಿ ಸುರಸಭೆಯೊಳಂ । ತರತರದಿ ಮನ್ಮಥಂ ಬರೆದಿಟ್ಟ ಚಿತ್ತರದ ಬೊಂಬೆಗಳಿದೆಂಬಂತಿರೆ ॥ ೧ ॥

ಕಂದ

ಬಾಲೆಯರಿಂತಯ್ದಿಯೆ ಸುರ । ಪಾಲನ ಸಮ್ಮುಖದೊಳಗತಿ ಲೀಲೆ ಯೊಳಾಗಂ ॥ ತಾಳದ ಲಯದೊಳ್ ನಾಟ್ಯವ । ಬಾಲೆಯರ್ ಮುದದಿಂದಾ ಡಿದರತಿ ಕುಶಲದೊಳುಂ ॥ ೧ ॥

ರಾಗ ನಾಟಿ ಆದಿತಾಳ

ಆಡಿದರಪ್ಸರನಾರಿಯರು । ಪಾಡಿ ಪೊಗಳಿ ಸುರವರನನು ನಾಟ್ಯವ । ಆಡಿದರಪ್ಸರನಾರಿಯರು ॥ ಪ ॥ ದೇವಾಧಿಪ ಸೇವಕಜನಸಂಜೀವ । ದಾನವಸಂಕುಲ ವನದಾವ । ನೀ ಮಹಾನುಭಾವ ॥ ಧೇಂ ಧೇಂ ತಕದಿಂ ದಿಂತಕ ಝೇಂತಾ । ಝೇಂತಾ ತಕದಿಂ ನಾನುತ ತಕತತ್ತರಿ ತರಿಕಿಣತೋ ಯೆಂ । ದಾಡಿದರಪ್ಸರನಾರಿಯರು ॥ ೧ ॥ ಬಾಲಾರ್ಯಮಕೋಟಿ ಭಾಸುರ ಗುಣಶೀಲ । ನಿತ್ಯಸಜ್ಜನಪಾಲ । ನವ್ಯತರ ಸುಚೇಲ ॥ ತಕ್ಕುತ ತಕ್ಕುತ ಝೇಂ ತಕ್ಕುತ ಝೇಂತಕ ದಧಿಗಿಣತೊಯೆಂ । ದಾಡಿದರಪ್ಸರನಾರಿಯರು ॥ ೨ ॥

ಭಾಮಿನಿ

ಸುರಸತಿಯರೀ ಪರಿಯ ನರ್ತಿಸು । ತಿರಲು ಕಾಣುತಲದರೊಳೂರ್ವಶಿ । ತರುಣಿಯೊಬ್ಬಳೆ ಹೊರತು ಬಳಿಕುಳಿದವರು ಈ ತೆರದಿ ॥ ಭರತಶಾಸ್ತ್ರದಿ ನಲಿದು ನರ್ತಿಸು । ವರನು ಕಾಣೆನೆನುತ್ತಲರ್ಜುನ । ಬೆರಗುವಟ್ಟಿರೆ ಹರಿದು ದೋಲಗವಿಂದ್ರನಾಜ್ಞೆಯಲಿ ॥ ೧ ॥

ದ್ವಿಪದಿ

ಸುರಪನಾ ಸತಿಯರಿಗೆ ವೀಳ್ಯವನು ಕೊಡಿಸಿ । ಸುರರನೆಲ್ಲರನಯ್ದೆ ಘನ ಹರುಷ ಪಡಿಸಿ ॥ ೧ ॥ ಮನೆಗಳಿಂಗೆಲ್ಲರನು ಕಳುಹಿ ಬೇಗದಲಿ । ತನುಜ ಸಹಿತಾರೋಗಿಸಿದನು ಹರುಷದಲಿ ॥ ೨ ॥ ನರನ ಕಳುಹಿಸಿ ಬೇರೆ ಮನೆಗೆ ಪವ ಡಿಸಲು । ಸುರಪಾಲ ಕರದೆಂದ ಚಿತ್ರಸೇನನೊಳು ॥ ೩ ॥ ಸುತನ ಮನಸೂರ್ವ ಶಿಯ ಮೇಲೆ ನಟ್ಟಿಹುದು । ಸತಿಯುವಳ ನೀನಾತನಲ್ಲಿಗಟ್ಟುವದು ॥ ೪ ॥ ಇನಿತು ಸತಿಯರೊಳವಳನಕ್ಷಿಯಲಿ ಮುದದಿ । ಮನವಿಟ್ಟು ನೋಡಿದನು ಕಳುಹು ನೀ ಜವದಿ ॥ ೫ ॥ ಎನಲು ಕೇಳುತ ಚಿತ್ರಸೇನ ಜೀಯೆನುತ । ವನಿತೆಯೂರ್ವಶಿಯ ಮನೆಗಯ್ತಂದ ನಗುತ ॥ ೬ ॥

ಕಂದ

ನಡೆತರುತ ಚಿತ್ರಸೇನಂ । ನುಡಿಸಲು ಸಖಿಯೋರ್ವಳಯ್ದಿಯಾತನ

Scanned by CamScanner

ತ್ತುಡುಗರೆಯಿಾಯುತಲೆಂದಳು ಬರವಂ ॥ ಒಡತಿಗೆ ಸೂಚಿಸಿ ಕರೆಸು । ಊರ್ವಶಿ ಮುದದಿಂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಏನು ಬಂದ್ಯೆ ಚಿತ್ರಸೇನ ನಿ । ಧಾನಮಾಗಿಯೆ ಪೇಳು ಸುರಪತಿ । ತಾನೆ ಕಳುಹಿಸಿದನೊ ಸ್ವಕಾರ್ಯವೊ । ಮಾನನಿಧಿಯೆ ॥ ೧ ॥ ಎನಲು ನಗು ತೆಂದನು ಸುರೇಶ್ವರ । ತನುಜನಲ್ಲಿಗೆ ನಿನ್ನ ಕಳುಹಲು । ತನಗೆ ನೇಮವ ಕೊಟ್ಟು ಬೀಳ್ಗೊ ॥ ಟ್ಟನು ಮೃಗಾಕ್ಷಿ ॥ ೨ ॥ ನಂದನನು ತನಗರ್ಜುನನು ನೀ । ನಿಂದು ಸೊಸೆಯಾಗಲಿಯೆನುತ್ತ ಪು । ರಂದರನು ಕೇಳೆನ್ನನಟ್ಟಿದ । ಮಂದಗಮನೆ ॥ ೩ ॥ ಇಂತೆನಲು ಕೇಳ್ದೂರ್ವಶಿಯು ಘನ । ಸಂತಸವ ಪಡು ತುಬ್ಬಿ ಮನದೊಳು । ಕಾಂತೆಯರ ಕರೆಸಿದಳು ಸದ್ಗುಣ । ವಂತೆಯರನು ॥೪॥

ಭಾಮಿನಿ

ಕೇಳು ಧರಣಿಪ ಚಿತ್ರಸೇನನ । ಬೀಳುಗೊಂಡು ಸಹಸ್ರಸಂಖ್ಯೆಯು । ಕೇಳ ಮೇಳದ ಸಖಿಯರಿಂದಾನಂದಜಲಧಿಯಲಿ ॥ ಬಾಲೆ ಮುಳುಗುತ ನರನ ನೋಳ್ಪಾ । ಲೀಲೆಯಲಿ ನವರತ್ನ ಮಣಿಗಣ । ಜಾಲಭೂಷಿತೆಯಾಗಿ ಪೊರಟಳು ದಿವ್ಯ ಕಾಂತಿಯಲಿ ॥ ೧ ॥

ರಾಗ ಪುನ್ನಾಗ ಅಷ್ಟತಾಳ

ಬಂದಳೇನೆಂಬೆ ಬಾಲೆಯು ಬರವ ಸಾ । ನಂದದಿಂ ಸ್ತ್ರೀವೃಂದ ಸಹಿತ । ಮಂದಗಾಮಿನಿ ಚಂದದಿ ॥ ಬಂದಳೇನೆಂಬೆ ॥ ಪ ॥ ಮಡದಿರನ್ನೆಯು ಸುತ್ತ ಮುತ್ತಲು ಚೆಲ್ವ । ಹಡಪ ಕನ್ನಡಿ ವ್ಯಜಿನಚಾಮರ । ವಿಡಿದು ಬರುತಿಹ ಸಖಿಯರು ॥ ತಡೆಯದಂಗಜನೆಂಬ ಕಿರಾತನು । ಕಡುಗಿ ಮುನಿವೃಗ ವಿಡಿಯೆಕಳುಹಿದ । ಪಡೆಯೆನಲು ನಡೆತಂದಳು ॥ ಬಂದ ॥ ೧ ॥

ವಾರ್ಧಿಕ

ಒರೆಯುಲಳವಲ್ಲವಳ ಹಾವಮಂ ಭಾವಮಂ । ನೆರೆದು ಬಹ ತರುಣಿಯರ ಹಂತಿಯಿಂ ಕಾಂತಿಯಿಂ । ಮೆರೆದು ರಂಜಿಪ ಕೊಂಕುಗುರುಳಿಂದ ಬೆರಳಿಂದಲೆಸೆವ ಮುದ್ರಿಕೆಗಳಿಂದ ॥ ಪರಿಪರಿಯ ಸೌಂದರ್ಯವತಿಯರಂ ಸತಿಯರಂ ಕರೆಕರೆದು ಗಾನಮಂ ಪಾಡಿಸುತ ಲಾಲಿಸುತ । ನರನನೊಡಗೂಡುವ ವಿಲಾಸದಿಂ ತೋಷದಿಂ ಬರುತಿರ್ದಳೇನ್ ಪೊಗಳ್ವೆನು ॥೧॥ ಅರಸ ಕೇಳಿಂತು ಸತಿಯರ ನಡುವೆ ಗಗನದೊಳ್ ಮೆರೆವೆ ನಕ್ಷತ್ರಮಧ್ಯದ ಚಂದ್ರನಂತೆ ಭಾ । ಸುರತೆ ಮಿಗಲಂದಣವನೇರಿ ಪರಿಮಳಗಳಂ ದೆಸೆದೆಸೆಗೆ ಪಸರಿಸುತ್ತ ॥ ಹರುಷದಿಂ ಬರುವ ಸತಿಯರ ಕಾಣುತೆಲ್ಲರುಂ । ನರನ ಪುಣ್ಯೋದಯಕೆ ಸರಿಗಾಣೆನೆಂದಾಡು । ತಿರೆ ಪಾರ್ಥನಿರ್ಪ ಮಂದಿರಕೆ ಬಂದಂದಣವನಿಳಿದಳೂರ್ವಶಿಯು ಮುದದಿಂ ॥ ೨ ॥

ರಾಗ ಕೇದಾರಗೌಳ ಅಷ್ಟತಾಳ

ಚೆಲುವೆಯರರಸಿ ಈಪರಿಯಿಂದಲಂದಣ । ವಿಳಿದು ಕಾಂತೆಯರನೆಲ್ಲ ॥ ನಿಲಿಸಿ ಬಾಗಿಲೊಳು ತಾನೊಬ್ಬಳೆವೊಳಪೊಕ್ಕ । ಳೊಲುಮೆಗಾರ್ತಿಯರೊಡನೆ ॥ ॥ ೧ ॥ ನರ ಮಲಗಿರುವಲ್ಲಿಗಯ್ದಿ ಕರವನೊರ್ವ । ತರುಣಿಯ ಪೆಗಲೊಳಿಟ್ಟು ॥ ಸ್ಮರನ ಪೂಶರಕೆ ಮೆಯ್ಗೊಟ್ಟು ತಾ ನಿಂದಳು । ಪರಿಕಿಸುತಾತನನು ॥ ೨ ॥ ಮದನಾರಿಯೊಳು ಸೆಣಸಿದ ಧೀರ ಸ್ಮರನಿಗೆ । ಬೆದರಿ ಹಿಮ್ಮೆಟ್ಟುವನೆ ॥ ಬದಲೊಂದನರಿಯದೆ ಸುಖನಿದ್ರೆಯಿಂದಿರ್ದ । ಪದುಮನಾಭನ ಸಖನು ॥ ೩ ॥

ಭಾಮಿನಿ

ಏನ ಹೇಳುವೆನರಸ ಮತ್ತಾ । ಮಾನಿನಿಯ ತನುಗಂಧ ಪಸರಿಸಿ । ತಾ ನರನ ಸನ್ಮುಖಕೆ ತಿಳಿದುದು ನಿದ್ರೆ ನಿಮಿಷ ॥ ಮಾನನಿಧಿ ಪರಿಮಳವಿದೆತ್ತಣ । ದೇನಿದೇನಚ್ಚರಿಯೆನುತಲವ । ಳಾನನವನೀಕ್ಷಿಸುತಲಿಳಿದನು ಮಂಚದಿಂದಿಳೆಗೆ ॥

ರಾಗ ಕಾಂಭೋಜ ಝಂಪೆತಾಳ

ಶಿವ ಶಿವನೆ ತರುಣಿ ವಾಸವಸಭೆಯು ಸೂರೆಗೊಂ । ಡವಳಿವಳು ಇಂದ್ರಗನುಕೂಲೆ ॥ ಇವಳಿಗೆರಗಲು ಬಹುದೆನುತ್ತಲತಿ ಭಕ್ತಿಯೊಳ । ಗವನೆಂದನಾ ತರುಣಿಯೊಡನೆ ॥ ೧ ॥ ಏನು ತೆರಳಿದಿರವ್ವ ಕುಳ್ಳಿರಿ ಸುರೇಶ್ವರನ । ಮಾನಿನಿಯರಯ್ಸೆ ನಿಮ್ಮಡಿಗೆ ॥ ತಾನೆರಗಬಹುದು ಕಾರ್ಯವ ಬೆಸಸಿರೆನೆ ಕೇಳ್ದು । ಮಾನಸದಿ ಬೆರಗಾದಳಂದು ॥ ೨ ॥ ಆಶ್ಚರ್ಯ ತಾಳಿದಳು ಲಜ್ಜೆಯಿಂ ಬಾಗಿದಳು । ಮೆಚ್ಚಿದಳು ನರನ ನಡವಳಿಗೆ ॥ ಹೆಚ್ಚಿದಳು ಮನ್ಮಥನ ಶರಕೆ ಮಗುಳುತ್ತರವ । ನುಚ್ಚರಿಸೆ ಪ್ರತಿಗಾಣದಬಲೆ ॥ ೩ ॥ ಯಾಕೆ ನುಡಿದನೊ ಚಿತ್ರಸೇನನೆಂಬಾ ಪಾಪಿ । ಕಾಕು ಮಾಡಿದ ತನ್ನ ನಕಟ ॥ ತಾ ಕೆಟ್ಟೆನೆನುತಲಾ ಕ್ಷಣಕೆ ಮಗುಳುತ್ತರವ । ನಾ ಕಮಲಮುಖಿ ನುಡಿದಳಿಂತು ॥ ೪ ॥ ಎಲೆಲೆ ನರ ನೀನೇಕೆ ಭ್ರಮೆಗೊಂಡೆ ಸುರಪಾಲ । ಕಳುಹಿಸಿದರಿಂ ಬಂದೆನೀಗ ॥ ಉಳಿಯಗೊಡ ಮನ್ಮಥನು ಮನು ಮನೋಭೀಷ್ಟವನು । ಸಲಿಸು ಸಂಶಯವೇಕೆ ನಿನಗೆ ॥ ೫ ॥

Scanned by CamScanner

ರಾಗ ಸೌರಾಷ್ಟ್ರ ತ್ರಿವುಡೆತಾಳ

ಹರ ಹರೀ ಮಾತೇತಕೆಂಬಿರಿ । ಧೊರೆ ಪುರೂರವನರಸಿ ಪೂರ್ವದಿ ।
ತರುಣಿ ನೀ ಪೂರಾಯರಾಯುನಿ । ಗಿರದೆ ನಹುಷ ॥ ೧ ॥ ತನುಜನಾದನು
ತತ್ಕುಲದಿ ನಾ । ಜನಿಸಿ ಪಾತಕಕೆಳಸುವೆನೆ ನೀ । ಜನನಿ ನಮ್ಮಾನ್ವಯಕೆ
ಸಿದ್ಧವಿ । ದೆನುತ ಮಣಿದ ॥ ೨ ॥ ಮರುಳೆ ಫಲುಗುಣ ಕೇಳು ಧರ್ಮವು ।
ಮೆರೆವುದೇ ಗಣಿಕೆಯರ ಮನೆಯಲಿ । ತರುಣನಾಗಲಿ ತಂದೆಯಾಗಲಿ । ಧುರದಿ
ಮಡಿದ ॥ ೩ ॥ ಧುರಪರಾಕ್ರಮಿಗಳನು ಕ್ರತುಗಳ । ವಿರಚಿಸಿದ ಮಾಹಾತ್ಮ
ರನು ನಾ । ನೆರೆವೆಯೊಬ್ಬಳೆ ಕಾಂಬೆ ತಾನೀ । ತೆರದೊಳೆನಲು ॥ ೪ ॥
ತರುಣಿಮನವನು ಸಲಿಸದವ ತಾ । ಸುರಪನಾಗಲಿ ಚಂದ್ರನಾಗಲಿ । ಕುರಿ
ಕಣಾ ಫಡ ಮನುಜ ನೀನೆಂ । ತರಿವೆಯದನು ॥ ೫ ॥

ರಾಗ ಕಾಂಭೋಜ ಏಕತಾಳ

ಇಂಥಾ ಮಾತೇಕೆಂಬಿರವ್ವ । ಪಂಥವೇಕೆನ್ನೊಡನೆ । ಅಂತರಂಗ
ಶುದ್ಧವಾಗಿ । ಇಂತೆಂಬೆ ನಾ ನಿಮ್ಮೊಡನೆ ॥ ಪ ॥ ಮನುಜದೇಹವಿದು ಸದ್ಧ
ರ್ಮದಿ । ನಡೆವುದೆಮಗೆ ನೀತಿ । ತನು ನಿಲ್ಲುವ ತನಕವಾದರೆ । ಸುಮನಸರ್ಗೆ
ಪ್ರೀತಿ ॥ ಅನಿಮಿಷಲೋಕ ಸಾರ್ದ । ಡವರ ಮಾರ್ಗ ಬೇರೆ । ಘನವೆ
ದೇಹಕೆ ವಿಷಯವಿದನು । ಸುಡುಯೆಂದಳಾ ನೀರೆ ॥ ೧ ॥ ಹರ ಹರಾ
ಸದ್ಧರ್ಮಮಾರ್ಗದಿ । ನಡೆವ ಪುರುಷರಹುದು । ತರುಣಿಯೊರ್ವಳಿಂಗೆ
ರಮಣ । ರಯ್ವರಾಗಬಹುದು ॥ ಸುರಲೋಕಕ್ಕೆ ಬರಲು ಬಂತು । ಪರಮ
ತತ್ತ್ವ ನಿನಗೆ । ನರರೊಳಧಮನೆನೆ ಕಯ್ ಮುಗಿಯು । ತೆಂದ ಮಗುಳೂರ್ವ
ಶಿಗೆ ॥ ೨ ॥ ಜನನಿಯೆಂದ ನುಡಿಯ ಮಿಾರ । ಲರಿಯದೋರುವಳನು ।
ವನಿತೆಯೆಂದು ನಡೆವೆವಲ್ಲದೆ । ಮರೆವರೆ ನೀತಿಯನು ॥ ತನುವಿನ ಸುಖಕ್ಕಾಗಿ
ಮನವ । ಸ್ಮರಗೆ ಮಾರುಗೊಟ್ಟು । ಘನವಾದ ಪಾಪಕ್ಕೆ ಬಿದ್ದು । ಬಾಳ್ವುದಾ
ನಿನ್ನೆಷ್ಟು ॥ ೩ ॥ ಜನನಿಮಾತಿಗಾಗಿ ಕೂಡಿ । ನೆರೆದಿರೋರ್ವಳನ್ನು ।
ಜನಕನಿಂದ್ರನೆಂದ ಮಾತ । ಮಿಾರಬಹುದೆ ನೀನು ॥ ಮನಸಿಜನ ಬಾಣದಿಂದ ।
ದಣಿದೆನಯ್ಯ ಎನಗೆ । ಘನವಾದ ಮೋಹದಿ ರಮಿಸು । ಎರಗುವೆ ನಾ
ನಿನಗೆ ॥ ೪ ॥ ಕಾಡಬೇಡ ತಾಯೆ ಮುಂದಿ । ನ್ನಾಡಲೊಮ್ಮೆ ನಾನು ।
ನೋಡದೊಂದೆ ಮನದೊಳಿರಲು । ಮನ್ಮಥ ಮಾಳ್ಪುದೇನು ॥ ಬೇಡಿಕೊಂಬೆ
ಪಾದಕೆರಗಿ । ತಾಯಿ ತನುಜರನ್ನು । ನೋಡಲ್ ಬಂದ ಕೊರತೆಯುಂಟೆ ।
ಬಿಜಯಂಗೆಯ್ಯಿರಿನ್ನು ॥ ೫ ॥

ವಾರ್ಧಿಕ

ನರನೆಂದ ನುಡಿಯನುಂ ಕೇಳ್ದು ಕೆಂಗಿಡಿಯನುಂ । ಕರೆದಳವಳಕ್ಷಿಯಿಂ
ಬೀತುದು ಮುಖಾಕ್ಷಿಯಿಂ । ಕರುಣರಸವಾರಿದುದು ಕ್ರೋಧ ಮುಂದರಿದುದಾ
ಹರಿಣಾಂಕನಿಭವಕ್ತ್ರದ ॥ ವರ ಕಾಂತಿ ತಗ್ಗಿದುದು ಮೋಹಮಂ ಮುಗ್ಗಿ
ದುದು । ತರಳೆಯತಿತಾಪದಿಂ ಘನತರದ ಕೋಪದಿಂ । ತರಹರಿಸುವಂಗದಿಂ
ಬಹು ಮಾನಭಂಗದಿಂದಾ ಪಾರ್ಥಗಿಂತೆಂದಳು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎಲವೊ ಭಂಡರ ದೇವ ಖೂಳರ । ತಿಲಕ ಹೇಡಿಗಳರಸ ಷಂಢರ ।
ಕುಲಗುರುವೆ ತಾನಾವಳೆಂಬುದ । ತಿಳಿಯದಾದೆ ॥ ೧ ॥ ಹಿಡಿಯಿದಕೊ
ನರಗುರಿಯೆ ಶಾಪವ । ಕೊಡುವೆ ವತ್ಸರವೊಂದನೆಡೆಬಿಡ । ದೆಡಹಿ ಧರಿಸು
ಶಿಖಂಡಿತನವನು । ಪೊಡವಿಯೊಳಗೆ ॥ ೨ ॥ ಹರಿಹರಬ್ರಹ್ಮಾಮರೇಂದ್ರರ ।
ಮರೆಯ ಪೊಕ್ಕರು ತೀರದೆಂದೆನು । ತಿರದೆ ಪೊರಟಳು ಕೋಪದಿಂದಾ । ತರುಣಿ
ಯಂದು ॥ ೩ ॥

ಕಂದ

ಇಂತೆಂದೂರ್ವಶಿ ಘನತರ । ಸಂತಾಪದಿ ಶಪಿಸಿ ಪೋಗಲ್ ನರ ತಾ
ಬಳಿಕಂ ॥ ಚಿಂತಾಶರಧಿಯೊಳಾಳ್ದಂ । ಸಂತಾಪದಿ ತಾ ತನ್ನೊಳು ಮರುಗಿದ
ನಾಗಂ ॥ ೧ ॥

ರಾಗ ನೀಲಾಂಬರಿ ಆದಿತಾಳ

ಹರ ಹರಾ ಈ ತರುಣಿಯೆನ್ನ । ಜರೆದು ಪೋದಳಿಂದು ॥ ಬರಿದೆ ತನ್ನೊ
ಳಪರಾಧವ । ಹೊರಿಸಿ ಪೋದಳ್ ಬಂದು ॥ ೧ ॥ ವನಿತೆ ದೇವವಧು ತಾನೆತ್ತ ।
ಮನುಜನು ತಾನೆತ್ತ ॥ ತನಗಿನ್ನಾವ ಭವದ ಪಾಪ । ವಿನಿತು ಕಯ್‌ಗೂಡಿ
ಸಿತು ॥ ೨ ॥ ಧರೆಯೊಳಿನ್ನು ವರುಷವೊಂದಾ । ಬರಿದೆ ಷಂಢತನದಿ ॥ ಇರುವು
ದುಂಟೆ ಕುರಿಗಳಂತೆ । ಹರಣವಿಡಿದು ಭರದಿ ॥ ೩ ॥ ಧರಣೀಶನಿದ್ದಲ್ಲಿಗಯ್ದಿ ।
ನ್ನೊರವೆನಿಂತೀಪರಿಯ ॥ ಸರುವಥಾ ನಾ ಕೆಟ್ಟೆನೀಗ । ಸುರಲೋಕದೊಳ್
ವಿಧಿಯೆ ॥ ೪ ॥ ಶಿವನ ಶರವ ಪಡೆದೆ ನಾ ಕೌ । ರವನ ಕೊಲುವೆನೆಂದು ॥
ಯುವತಿ ನುಡಿದ ನುಡಿಗೆ ಮುಂದೆ । ಹವಣವಿನ್ನೆಂತಿಹುದೊ ॥ ೫ ॥

ಭಾಮಿನಿ

ಏಕೆ ಬಂದೆನೊ ಸುರಪುರಕೆ ವಿಧಿ । ಕಾಕುಮಾಡಿಸಿತೆನ್ನ ನಕಟಾ । ಸಾಕು
ಸಂಸಾರಗಳ ಸುಡಲೆಂದರ್ಜುನನು ಮರುಗಿ ॥ ವ್ಯಾಕುಲಂಬಡುತಿರಲು

Scanned by CamScanner

ಈಚೆಯೊ । ಳಾ ಕಮಲಮುಖಿ ಚಿತ್ರಸೇನನ । ತಾ ಕರೆದು ಪೇಳಿದಳು ಮಾನಚ್ಯುತಿಯನವನೊಡನೆ ॥ ೧ ॥

ಕಂದ

ಇಂತೆನೆ ಕೇಳ್ದಾತಂ ಸುರ । ಕಾಂತನ ಬಳಿಗಯ್ದಿ ಪೇಳ್ದನೀ ವಾರ್ತೆಯನುಂ ॥ ಕುಂತಿಯ ವರ ಸುತನೊಳು ತಾ । ನಿಂತೆಂದಂ ಗುಣವಂತನೊಳಾಗಳ್ ಮುದದಿಂ ॥ ೧ ॥

ರಾಗ ಭೈರವಿ ಝಂಪೆತಾಳ

ಬಂದು ಸುರಪಾಲಕನು । ಕಂದು ಮೊಗದಿಂದಿರುವ । ನಂದನನ ಕಾಣುತಿಂ । ತೆಂದ ನಸುನಗುತ ॥ ೧ ॥ ಏನಯ್ಯ ಪಾರ್ಥ ದು । ಮ್ಮಾನವೇಕೆಲೆ ತಂದೆ । ಮೌನವೇಕುಸುರು ತ । ನ್ನಾನೆ ಬಾರೆನುತ ॥ ೨ ॥ ನೋಡುತಲೆ ಮಗನ ಮು । ದ್ದಾಡಿ ಮೊಗ ನೋಡಿ ಮಾ । ತಾಡಲರ್ಜುನ ಲಜ್ಜೆ । ಗೂಡಿ ತಲೆವಾಗಿ ॥ ೩ ॥ ಮರುಗುತಿರೆ ಮನದೊಳಗೆ । ಮರಳಿ ಬಿಗಿಯಪ್ಪಿ ಸುರ । ವರನು ಮಗುಳೆಂದ ಸಿತ । ತುರಗನೊಳು ಮುದದಿ ॥ ೪ ॥ ತರುಣ ಕೇಳ್ವೈವೃಥಾ । ಮರುಗದಿರು ತರುಣಿಯುಪ । ಕರಿಸಿದಳು ಬರಿದೆ ನೀ । ನರಿಯದಾದೆಯಲಾ ॥ ೫ ॥ ವರುಷವಜ್ಞಾತದ । ಲ್ಲಿರಲು ಸಾಧನಮಾಯ್ತು । ನೆರೆ ಷಂಢತನವನಾ । ಚರಿಸಬಹುದೆಂದ ॥ ೬ ॥

ಭಾಮಿನಿ

ಅರಿಗಳಿಗೆ ಕಾಣಿಸದೆ ಮರೆಯಿಂ । ದಿರಲು ಬೇಕಜ್ಞಾತವಾಸದಿ । ದೊರಕಿದುದು ಪುಣ್ಯದಿ ನಪುಂಸಕತನವು ಮರೆಗೊಂಡು ॥ ವರುಷವೊಂದನು ತೀರ್ಚಬಹುದೀ । ಪರಿಯನರಿಯದೆ ಮರುಗಬೇಡೆಂ । ದರಮನೆಗೆ ಕರೆತಂದನಮರಾಧಿಪ ಧನಂಜಯನ ॥ ೧ ॥

ವಾರ್ಧಿಕ

ಸುರಪನೀ ಪರಿಯಿಂದಲರ್ಜುನನನೊಡಬಡಿಸೆ । ಮರುತ ಶಿಖಿ ಸೋಮರಸ್ತ್ರವನಿತ್ತರನಿಮಿಷರ । ತರುಣಿಯರ್ ಸೇಸೆ ತಳಿದರ್ಜುನಗೆ ಜಯಮೆಂದು ಮಗುಳಿಂದ್ರನತಿತೋಷದಿಂ ॥ ನರಗಸ್ತ್ರಶಸ್ತ್ರದ ರಹಸ್ಯಮಂತ್ರವನರುಪಿ । ಭರತವಿದ್ಯೆಯನುಸಿರಿ ಸುತನೊಡನೆ ಹರುಷದಿಂ । ದಿರುತೊಂದು ದಿನವಸುರರುಪಹತಿಗೆ ಮರುಗುತ್ತ ಪಾರ್ಥನೊಡನಿಂತೆಂದನು ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಕೇಳಯ್ಯ ಪಾರ್ಥ ನಾನೆಂಬ ಮಾತನು ಸುರ । ಜಾಲಕ್ಕೆ ಬಂದ ಕಂಟಕವು ॥ ಪೇಳಲರಿದು ಖೂಳಖಳರು ಪಟ್ಟಣವನು । ಧಾಳಿಟ್ಟು ಸೆಳೆದರ್ ವಸ್ತುಗಳ ॥ ೧ ॥ ನಿರತ ಬಂದಮರರ ಬಡೆದು ಬಾಧಿಸುವರು । ತಿರುಗಾಡಬಿಡರು ಸ್ವರ್ಗದೊಳು ॥ ಅರಹುವುದೇನು ಮುಚ್ಚಿದ ಕವಾಟವನೆಲ್ಲ । ತೆರೆಯಲೀಸರು ಮನೆಮನೆಯ ॥ ೨ ॥ ಸುರಲೋಕವಧಿಕ ಸಂಭ್ರಮದಿಂದಲಿರುವುದೀ । ವರೆಗೆ ದಾನವರಿಂದಲೀಗ ॥ ಮರುಗುವುದಾಯ್ತು ಸತಿಯರನೆಲ್ಲರನೀಗ । ಸೆರೆಯೊಳಿಟ್ಟಿಹರು ದಾನವರು ॥ ೩ ॥ ನಿನಗೀಶ್ವರನ ಕೃಪೆಯಾಯ್ತಯ್ಯೆ ಈ ದುಷ್ಟ । ದನುಜರ ಕುಲವ ಸಂಹರಿಸಿ ॥ ಅನಿಮಿಷರನು ತೋಷಬಡಿಸು ನಮ್ಮಯ ಸೈನ್ಯ । ವನು ಕೂಡಿಕೊಡುವೆ ಬೆಂಬಲಕೆ ॥ ೪ ॥

ಭಾಮಿನಿ

ಕೇಳು ಪಾರ್ಥ ನಿವಾತಕವಚರು । ಕಾಲಕೇಯರೆನಿಪ್ಪ ಬಹು ದೈ । ತ್ಯಾಳಿಯಿಹುದವದಿರನು ತೀರ್ಚಿಸಿ ನಮ್ಮ ಸಲಹೆನಲು ॥ ಆಲಿಸುತ ನರನಧಿಕ ಹರುಷವ । ತಾಳಿ ಶೌರ್ಯದೊಳುಬ್ಬಿ ಸುಮನಸ । ಪಾಲಕಗೆ ಕಯ್ ಮುಗಿವುತೆಂದನು ಮಧುರವಚನದಲಿ ॥ ೧ ॥

ರಾಗ ಭೈರವಿ ಮಟ್ಟೆತಾಳ

ತಾತ ಕೇಳಿದಾವ ದೊಡ್ಡ । ಮಾತಪೇಳ್ವಿರಿ । ಪೇತುರಕ್ಕಸರರಿಗೇಕೆ । ಭೀತಿ ತಾಳ್ವಿರಿ ॥ ಪಾತಕಾತ್ಮರಾಗಿರುವ ನಿ । ವಾತಕವಚರ । ಧಾತುಗೆಡಿಸಿ ಸುಖದೊಳಿಡುವೆ । ನಿಮ್ಮ ದಿವಿಜರ ॥ ೧ ॥ ತರಿಸು ರಥವನೇಕೆ ನೋಳ್ಪೆ । ನೆರಹು ಬಲವನು । ಧುರದೊಳಾಂತು ತರಿವೆನಾ ದು । ರಾತ್ಮಕುಲವನು ॥ ಕರೆಸು ಸಾರಥಿಯನು ತಡೆಯ । ದೆಂಬ ಮಗನನು । ಹರುಷದಿಂದಲಪ್ಪಿ ಮುದ್ದಿ । ಸುತ್ತ ಸುರಪನು ॥ ೨ ॥ ಮಾತಲಿಯನು ಕರೆದು ರಥವ । ಹೂಡೆನುತ್ತಲಿ । ಚಾತುರಂಗಬಲವ ನೆರಹಿ । ಕೊಂಡು ಮುದದಲಿ ॥ ಶ್ವೇತತುರಗನಾಗಲಿಂದ್ರ । ಗೆರಗಿ ರಥವನು । ಸಾತಿಶಯದೊಳೇರ್ದನಯ್ದೆ । ಕೊಂಡು ಧನುವನು ॥ ೩ ॥

ಭಾಮಿನಿ

ಪೊಡವಿಪತಿ ಕೇಳಮರಬಲವ । ಗ್ಘಡಿಸಿ ಕೂಡಿದು ದೇನನೆಂಬೆನು । ಹೊಡೆವ ದುಂದುಭಿ ಪಟಹ ಕಹಳಾರವದ ರಭಸದಲಿ ॥ ಒಡೆದುದೋ ಬ್ರಹ್ಮಾಂಡಮೆನೆ ಪಡೆ । ನಡೆದುದೆಡೆಯಿಲ್ಲೆಂಬವೋಲ್ ನರ । ನೊಡನೆ ಗರ್ಜಿಸಿ ವರ ಹಿರಣ್ಯಕಪುರಕೆ ಧಾಳಿಯಲಿ ॥ ೧ ॥

ರಾಗ ಮಾರವಿ ಏಕತಾಳ

ಸುರಸೈನಿಕವೀಪರಿಯಾರ್ಭಟಿಸ । ಲ್ಕುರುತರ ಸತ್ತ್ವದಲಿರದೆ ಹಿರಣ್ಯಕ । ಪುರವನು ಮುತ್ತುವ ಭರವಸದಿಂದಲಿ । ನರನೊಡನಯ್ತರುತಿರುವ ಬಗೆಯನು । ತೊಡನೆ ಏನನೆಂಬೆ ॥ ೧ ॥ ಘುಡುಘುಡುಘುಡಿಸುತಲೆಡೆವಿಡದಡಿಯಿಡು । ದಡಿಗಡಿಗೊದರುತ ಪಡೆ ನಡೆವ ಭರಕೆ । ಬೊಬ್ಬಿಡುತಲಿ ಖಡುಗವಿಡಿದು ಜಡಿ । ಕಡಲುಕ್ಕಿತು ನಡನಡುಗಿತು ಧರಣಿ । ಏನನೆಂಬೆ ॥ ೨ ॥ ಸರ್ಗಿಗಳೀಪರಿ ಭೋರ್ಗರೆವುತ ಖಳ । ವರ್ಗವನಂತಕನೂರ್ಗಟ್ಟುವೆವೆನು । ತೋರ್ಗುಡಿ ಸುತ ಪೊಂದೇರ್ಗಳ ನೂಕಿ ಭ । ಟರ್ಗಳಯ್ದಿ ಬಲು ದುರ್ಗವ ಮುತ್ತಿದ । ರೇನನೆಂಬೆ ॥ ೩ ॥

ವಾರ್ಧಿಕ

ಜನಮೇಜಯಾಖ್ಯ ಲಾಲಿಸು ದಿವಿಜಸೈನ್ಯಮಂ । ದನುಜಪುರವರ ವನುಂ ಮುತ್ತಿ ಮುತ್ತಲ್ಲಿರುವ । ಬಿನುಗು ಬಿಚ್ಚಟಿಯನುಂ ಬಡೆದಟ್ಟಲಾದುರ್ಗ ವೇನೆಂದರಿಯದಿವರನು ॥ ದನುಜನೊರ್ವಂ ಪೊರಗೆ ಗಜಬಜವಿದೇನೆನುತ । ಅನಿಮಿಷರ ಧಾಳಿಯೆಂಬುದನೀಕ್ಷಿಸುತ್ತಂದು । ಮನದೊಳುಬ್ಬುತಲಸುರನಾಥ ನೆಡೆಗಯ್ತಂದು ಮಣಿದನತಿ ತೋಷದಿಂದ ॥ ೧ ॥

ಕಂದ

ಹರುಷದಿನೆರಗಿದ ಖಳನಂ । ಪರಿಕಿಸುತಸುರೇಂದ್ರನಯ್ದೆ ನಸುನಗೆ ಯಿಂದಂ ॥ ಕರೆದೆಂದನೆಲವೊ ಮುದವೇ । ನರುಹೆನಲವನೆಂದನೊಡನೆ ಕುಟ್ಮಲಕರದಿಂ ॥ ೧ ॥

ರಾಗ ಮುಖಾರಿ ಏಕತಾಳ

ದನುಜೇಶ ಲಾಲಿಸೆನ್ನ ಮಾತ । ಪೇಳುವೆ ನಿರ್ಭೀತ ॥ ದನುಜೇಶ ॥ ॥ ಪ ॥ ಹರಣದಾಸೆಯ ತೋರದಿಂದು । ಸುರಸೈನ್ಯವಿಂದು । ಪುರವ ಮುತ್ತಿದರಯ್ಯ ಬಂದು ॥ ಅರುಹುವುದೇನೈ । ಕರೆಸು ಮಾರ್ಬಲವನು । ತಿರು ಕುಳರಿಂಗೀ । ತೆರದ ಪರಾಕ್ರಮು । ಬರುವದು ಹೊಸತಿದ । ಪರಿಕಿಪುದಿಂದವ । ದಿರ ಸತ್ತ್ವವನೆಂ । ದೆರಗಿದನಂದು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎನಲು ಕೇಳುತ ಖತಿಯೊಳಾ ದೂ । ತನನು ಹೊಯ್ ಹೊಯ್ ತಪ್ಪುವನೆ ಸುರ । ಜನಪನೀತನ ನಾಲಗೆಯ ಕೊ । ಯ್ಯೆನುತಲಾಗ ॥ ೧ ॥

ದನುಜಪತಿಯಾರ್ಭಟಿಸೆ ಬಂದಿರು । ವನನು ನಿಮಿಷದಿ ಮುನ್ನ ಸೀಳಿದು । ಮಗುಳೆ ತನಗಾಜ್ಞೆಯನು ಮಾಡುವು । ದೆನುತ ಖಳನು ॥ ೨ ॥ ನುಡಿಯ ಕೇಳುತ ಬಂದನೇ ಸುರ । ರೊಡೆಯನೆಮ್ಮಯ ಪುರಕೆ ತಾನೇ । ಕಡೆಯ ಕಾಲ ವಿದಾತಗೆನುತಾ । ಧಡಿಗ ಖಳರು ॥ ೩ ॥ ಕರಿ ತುರಗ ರಥ ಸಹಿತ ದೈತ್ಯರ । ನೆರವಿಯನು ನೂಕಿದನು ದುರ್ಗವ । ಪೊರಟುದಸುರರ ಚೂಣಿ ಕಲ್ಪದ । ಶರಧಿಯಂತೆ ॥ ೪ ॥

ಕಂದ

ಕಡುಪಿಂದಂ ದೈತ್ಯಕುಲಂ । ಬಿಡುಗಣ್ಣರ ಪಡೆಯನಯ್ದೆ ತರಿವೆವೆನುತ್ತಂ॥ ಗುಡುಗುಡಿಸುತೆ ಕೆಂಧೂಳ್ ನಭ । ಕಡರುತ್ತಿರಲಾರ್ದು ಪೊಕ್ಕರಿಸೈನ್ಯ ವನುಂ ॥ ೧ ॥

ರಾಗ ಪಂಚಾಗತಿ ಮಟ್ಟೆತಾಳ

ಖಳರು ಗಜ ವರೂಥ ಹಯ ಪದಾತಿ ಸಹಿತಲಿ । ಮೊಳಗುತಿಹ ಗಭೀರ ಭೇರಿರವದಿ ಭರದಲಿ ॥ ಮುಳಿದು ಸರಳಮಳೆಯ ಕರೆವುತಮರದಳವನು । ಕೊಲುತಲಿರ್ದರೇನನೆಂಬೆನವರ ಬಲುಹನು ॥ ೧ ॥ ಮರುತನುರುಬೆಗಿರದೆ ಹೊಯ್ದ ಮುಗಿಲ ತೆರದಲಿ । ಸುರರು ಖಳರ ಹತಿಗೆ ಪಾರ್ದರಿರದೆ ಭರದಲಿ ॥ ನರನು ಕಂಡು ನಗುತ ಮಾತಲಿಯೊಳು ರಥವನು । ಹರಿಸೆನುತ್ತಲುಬ್ಬಿಕೊಂಡ ನಿರದೆ ಧನುವನು ॥ ೨ ॥ ನಡೆಸು ರಥವನೆನಲು ಸುರಪಸೂತ ನಿಮಿಷಕೆ । ತಡೆಯುದಸುರಸೈನ್ಯವೆಂಬ ಶರಧಿಮಧ್ಯಕೆ ॥ ಬಿಡುವ ಸ್ಯಂದನವನು ಕಾಣು ತಂದು ದನುಜರು । ಫಡ ಫಡಿಂದ್ರ ಬಂದನೆನುತಲಾರ್ದು ಕವಿದರು ॥ ೩ ॥ ಇದಿರು ಬರುವ ಬಲವ ಸವರಿ ಬದಿಯೊಳಾಕುವ । ಮದಮುಖರನು ಸೀಳಿ ಪಿಂತೆ ಬರುವ ಸೈನ್ಯವ ॥ ಸದೆದು ಮೇಲೆ ಮೇಲೆ ಕವಿವ ಖಳರ ಮುರಿದನು । ಕುದುರೆಯಾನೆ ತೇರುಗಳನು ತರಿದು ಬಿಸುಟನು ॥ ೪ ॥

ವಾರ್ಧಿಕ

ತಡೆದು ಮುತ್ತಿದ ಚಾತುರಂಗಮಂ ಭಂಗಮಂ । ಬಿಡಿಸಿ ಮತ್ತಾ ನರಂ ಕೋಪದಿಂ ಚಾಪದಿಂ । ದಡಿಗಡಿಗೆ ಬಿಡದೆಸುತ ಸರಳನುಂ ಕೊರಳನುಂ ಕತ್ತರಿಸಿ ರಿಪುಬಲವನು ॥ ಪುಡಿಗೆಯ್ದು ದಾನವರ ಚೂಣಿಯಂ ಸಾಣೆಯಂ ಪಿಡಿದಲಗುಗಳನು ನೆರೆ ಪೂಡಿದಂ ನೋಡಿದಂ । ಧಡಿಗ ದೈತ್ಯೇಯರಸು ಜಾರ್ವುದಂ ಪಾರ್ವುದಂ ದೆಸೆದೆಸೆಗೆ ಬಾಯ ಬಿಡುತ ॥

ಕಂದ

ನರನುರುಬೆಗೆ ನಿಲಲಾರದೆ । ಮರಳಿದ ಬಾಯಿ ಬಿಡುತೆ ಬಿಟ್ಟ ಮಂಡೆ
ಯೊಳಾಗಳ್ ॥ ಪುರಮಂ ಪೊಕ್ಕಸುರೇಂದ್ರಂ । ಗರುಹಿದರು ಭೀತಿಯಿಂದೆ
ನಡನಡುಗುತ್ತಂ ॥ ೧ ॥

ರಾಗ ಮಾರವಿ ಏಕತಾಳ

ದನುಜೇಶ್ವರ ಕೇಳ್ ಬಂದವನತಿಬಲ । ನನಿಮಿಷರಂತಲ್ಲ ॥ ಅನು
ವರದೊಳು ದಾನವಬಲವನು ಗೆಲಿ । ದನು ನಿಮಿಷದೊಳೆಲ್ಲ ॥ ೧ ॥ ಕರಿರಥ
ತುರಗಪದಾತಿಯನೆಲ್ಲವ । ನುರುಳಿಸಿದನು ನೆಲಕೆ ॥ ಅರುಹುವುದೇನೆಂದೆರಗಲು
ಕೇಳ್ದಾ । ಶರವರನಾ ಕ್ಷಣಕೆ ॥ ೨ ॥

ರಾಗ ಭೈರವಿ ಝಂಪೆತಾಳ

ಎಲವೊ ಸುರಪನು ಖಳರ । ಮುರಿದನೇ ಇಂದೆಮ್ಮ । ಕುಲಕೆ ಕುಂದಾ
ಯ್ತೆನುತ । ಪಲುಮೊರೆವುತಾಗ ॥ ೧ ॥ ಬರಹೇಳು ಭರ್ಗನನು । ಜರೆವ
ದಾನವರನೆಂ । ದುರಿಯುುಗುಳುತಾ ದೈತ್ಯ । ರೆರೆಯ ಗರ್ಜಿಸುತ ॥ ೨ ॥ ನುಡಿಯ
ಕೇಳ್ದಸುರರವ । ಗಡಿಸಿ ಕೂಡಿದುದು ಬರ । ಸಿಡಿಲ ಗರ್ಜನೆಯಂತೆ । ಗುಡು
ಗುಡಿಸುತಾಗ ॥ ೩ ॥ ಒಡೆಯ ನೀನೇಕೇಳ್ವೆ । ಬಿಡು ಖತಿಯ ವಾಸವನ ।
ಮುಡದಿಯನು ಮುಂದಲೆಯ । ಪಿಡಿದು ತಹೆವಿಂದು ॥ ೪ ॥ ಶಿವನಡ್ಡನಿಲಲಿ
ಭೈ । ರವನು ತಾ ತಡೆಯಲಾ । ದಿವಿಜರನು ತಿಂದು ತೇ । ಗುವೆವೆನುತ
ಖಳರು ॥ ೫ ॥

ಭಾಮಿನಿ

ಇನಿತು ಪೇಳ್ದುದ ಕೇಳ್ದು ಆ ಶರ । ಜನಪ ವೀಳೆಯವಿತ್ತು ದೈತ್ಯರ ।
ನನುವರಕೆ ಬೀಳ್ಗೊಡಲು ಪೊರಟರು ಕೋಟಿಸಂಖ್ಯೆಯಲಿ ॥ ವನಧಿಗಳು
ತುಳುಕಾಡೆ ಭುವಿ ಬಿ । ಕ್ಕನೆ ಬಿರಿಯಲಾರ್ಭಟಿಸಿ ವಾದ್ಯದ । ಘನತರದ
ಘೋಷದಲಿ ನಡೆದರು ಸುರರ ಸಮ್ಮುಖಕೆ ॥ ೧ ॥

ಭೋಗಷಟ್ಪದಿ

ಧಡಿಗ ದೈತ್ಯರಂದು ದಿವಿಜ । ರೊಡೆಯನೆಲ್ಲಿ ತೋರೆನುತ್ತ । ಗುಡುಗುಡಿ
ಸುತೆ ಕವಿಯೆ ಸುರರ ಗಡಣ ಭರದಲಿ ॥ ತಡೆಯದೋಡುತಿರಲು ನರನು । ಘಡ
ಪಡೆನುತಲನಿತು ಖಳರ । ಪಡೆಯನೈಂದ್ರಶರದಿ ತರಿದನೊಡನೆ ಸತ್ತ್ವದಿ ॥ ೧ ॥
ಅರಸೆ ಪೇಳ್ವುದೇನು ದನುಜ । ರುರುಪರಾಕ್ರಮದಲಿ ಮತ್ತೆ । ಶರಧಿ ಮೇಲೆ
ಯೊಡೆದು ಬರ್ಪ ತೆರದೊಳುಲಿಯುುತ ॥ ನರನ ರಥವ ಮುಸುಕೆ ಕಾಣು ।

ತಿರದೆ ಖಾತಿಯಿಂದೆ ಮಗುಳೆ । ತರಿದು ಬಿಸುಟನರುಣಜಲವು ಪರಿದುದಗಲಕೆ ॥
॥ ೨ ॥ ಮತ್ತೆ ಖಳರು ಮುರಿದು ಕಾಣು । ತಿತ್ತಲಮರಸೈನ್ಯ ತೋಷ । ವೆತ್ತ
ಪಾರ್ಥ ಭಾಪು ಭಳಿರೆನುತ್ತಲುಲಿವುತ ॥ ಪತ್ತಿಗಜತುರಂಗರಥದ । ಮೊತ್ತ
ದಿಂದಲಾರ್ಭಟಿಸುತ । ಮುತ್ತಿಕೊಂಡರಸುರಪುರದ ಸುತ್ತಲಾ ಕ್ಷಣ ॥ ೩ ॥

ಭಾಮಿನಿ

ಸುರರು ಸುಮ್ಮಾನದಲಿ ದೈತ್ಯರ । ಸುರುಬಿ ಕೋಟೆಯನಡರುತಿರೆ
ಕಂ । ಡರರೆ ಸುಮನಸರಾಳು ದುರ್ಗವನೇರಿ ಬಂದರಲಾ ॥ ಕೊರಳ ಕಡಿ
ತಿವಿ ಕೊಲ್ಲು ತಿನ್ನಿರಿ । ಕರುಳನುಗಿಯೆನುತಾ ಶರೇಂದ್ರರು । ಧುರಕೆ ಪೊರ
ಟರು ಮೂರುಕೋಟಿ ನಿಶಾಚರರು ಸಹಿತ ॥ ೧ ॥

ರಾಗ ರೇಗುಪ್ತಿ ತ್ರಿವುಡೆತಾಳ

ನುಡಿಯಲರಿದು ನಿವಾತಕವಚರ । ಕಡುಹನದನೇನೆಂಬೆ ಕಲ್ಪದ ।
ಸಿಡಿಲವೊಳಗೆಂಬಂತೆ ಬಲು ಬೊ । ಬ್ಬಿಡುತ ಗಜ ರಥ ತುರಗ ಸಹಿತೊಡ ।
ನೊಡನೆ ಗರ್ಜಿಸುತಯ್ದೆ ಸುಮನಸ । ರೊಡೆಯನಾವೆಡೆ ತೋರು ತೋರೆನು ।
ತಡಿಯಿಡುತಲೆಡೆವಿಡದೆ ಬರುತಿರೆ । ಪಡೆವೆರಸಿ ಘುಡುಘುಡಿಸಿ ಕದನಕೆ ॥ ಬಂದ
ರಾಗ । ಖಳರ । ಯ್ತಂದರಾಗ ॥ ೧ ॥ ಕೊಲ್ಲಿರೋ ಮುಂಬರಿವ ಸುರರನು ।
ಬಿಲ್ಲ ಕಸಿಯಿರೊ ಬೆರೆತು ನಗುವರ । ಹಲ್ಲ ಮುರಿಯಿರೊ ತಲೆಯನೊಡೆ
ಯಿರೊ । ಚೆಲ್ಲಬಡಿದವದಿರ ಕರುಳ್ಗಳ । ನೆಲ್ಲವನು ಶಾಕಿನಿಯರಿಗೆ ನ । ಮ್ಮಲ್ಲಿ
ಯೌತಣವಾಗಲಯ್ತುವ । ನೆಲ್ಲಿ ತೋರಾ ಸುರಪನಾವೆಡೆ । ನಿಲ್ಲೆಲಾಹವಕೆನುತ
ದೈತ್ಯರು । ಬಂದರಾಗ । ಖಳರ । ಯ್ತಂದರಾಗ ॥ ೨ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರಸ ಕೇಳೀನೆಂಬೆನಿಂತಾ । ದುರುಳರಾರ್ಭಟಿಸುತ್ತ ಬರೆ ಕಂ । ಡಿರದೆ
ದೂರದಲೋಡತೊಡಗಲು । ಸುರರು ಭಯದಿ ॥ ೧ ॥ ತೋರು ತೋರಮು
ರೇಂದ್ರನಾವೆಡೆ । ತೋರಿಸೈರಾವತವನೆನುತಲೆ । ಭೂರಿ ಬಾಣವ ಕವಿದೆಸುತ
ಶರ । ವಾರ ಸಹಿತ ॥ ೨ ॥ ಬೊಬ್ಬಿರಿವುತಯ್ತರಲು ಕಾಣುತ । ಉಬ್ಬಿ ಮನದಲಿ
ಪಾರ್ಥನಿವದಿರ । ಕೊಬ್ಬ ಮುರಿವೆನು ಸೂತ ನೋಡೆನು । ತಬ್ಬರಿಸುತ ॥ ೩ ॥
ಧನುವ ಝೇವಡೆದಾರ್ದು ಬಾಣವ । ವನಧಿಯನು ತುಳುಕಿದನು ಪಾರ್ಥನ ।
ಕನಲಿಸಿದು ಜೀವಿಸಿದರುಂಟೇ । ಯನುವರದೊಳು ॥ ೪ ॥ ಕರಿರಥಾಶ್ವಪದಾತಿ
ಯನು ಹೊ । ಯ್ದೊರಸಿದನು ಮಾರ್ಬಲವ ದನುಜರ । ಕೊರಳ ಬಳೆಗಳು
ಕಳಚಲೆಚ್ಚನು । ಭರದಲಂದು ॥ ೫ ॥

ರಾಗ ಮಾರವಿ ಏಕತಾಳ

ಭರದೊಳೆಸುತ ಬಹ ನರನನು ಕಾಣುತ । ಲರರೆ ಬಂದ ಭಟ ಸುರಪನಲ್ಲ ಹೊಸ । ಪರಿಯ ವೀರನಿವನಿರಿತಕೆ ಬೆದರದೆ । ತರಿ ಕೊಲ್ಲಿರಿ ಎನುತುರುಬುತಾ ಖೂಳರು । ಖಾತಿಯಿಂದ ॥ ೧ ॥ ಘುಡುಘುಡಿಸುತಲಡಗೆಡಹಿರಿವನನೆನು । ತಿಡೆವಿಡಿದಾಕುವ ದಡಿಗರನೀಕ್ಷಿಸು । ತಡಿಗಡಿಗಂಬನು ತೊಡುತೊಡನೆಸೆವುತ । ಲಡಬಳಿಗರ ತಲೆಗೆಡಹಿದ ನರನು । ಖಾತಿಯಿಂದ ॥ ೨ ॥ ಖೂಳರನೀಪರಿ ಕೋಟಿಗೊಬ್ಬಿಬ್ಬರ । ಸೀಳಿದು ಘನತರ ಕೋಲಾಹಲದೊಳು । ಮೇಲೆ ಮೇಲೆ ಕವಿವಾಳು ಕುದುರೆಗಳ । ಬೀಳಗೆಡಹಿ ಖಳ ರೋಳಿಯ ಮುರಿದ । ಖಾತಿ ಯಿಂದ ॥ ೩ ॥

ಭಾಮಿನಿ

ಎಲೆಲೆ ಕವಿ ತಿವಿ ಕೊಲುವನೀತನು । ಬಲುಮೆಯುಳ್ಳವನಿಂದ್ರನಿಂದ್ರರ । ಬಳಿಯುವರ ಬಗೆಯಲ್ಲ ಕವಿ ತಿವಿ ಕರುಳನುಗಿಯೆನುತ ॥ ಖಳರು ಮುಸು ಕಲು ಮತ್ತೆ ಕೋಲಾ । ಹಲವನದನೇನೆಂಬೆನರ್ಜುನ । ನಳುಕದುಬ್ಬಿರಿದೆಚ್ಚ ನಂಬುಜಭವಮಹಾಶರವ ॥ ೧ ॥

ವಾರ್ಧಿಕ

ಅರಸ ಕೇಳಾ ಬ್ರಹ್ಮಮಾರ್ಗಣದ ಮುಖದಿಂದ । ಉರಿಯ ಕರಡಿಗೆಯ ಬಾಯ್ದೆರೆದಂತೆ ಕಬ್ಬೊಗೆಯು । ಘೊರಳಿ ಕಿಡಿಗಳ್ ಸೂಸಿದವು ಭುಗಿಲ್ ಭುಗಿಲು ಧಗಧಗವೆಂಬ ರಭಸದಿಂದ ॥ ಕರಿತುರಂಗಮು ರಥ ಪದಾತಿಗಳ್ ವೆರಸಿ ಮೋ । ಹರಿಸಿ ಮುತ್ತಿರ್ದ ಮೂಕೋರ್ಟಿ ದಾನವರ ನಿ । ಟ್ಟೊರಸಿದುದು ಮಾರ್ಮಲೆವರಂ ಕಾಣದಡಗಿತರ್ಜುನನ ವರ ಬಾಣಧಿಯೊಳು ॥ ೧ ॥

ರಾಗ ಭೈರವಿ ಝಂಪೆತಾಳ

ಅರಸ ಕೇಳಾ ಬ್ರಹ್ಮ । ಶರದುರಿಯೊಳಸುರಬಲ । ಉರಿದುದೊಂದೇ ಕ್ಷಣಕೆ । ನರನ ಕದನದಲಿ ॥ ೧ ॥ ಸುರರು ಸುಮ್ಮಾನದಲಿ । ಶರಧಿಘೋಷದಿ ಪೊಗಳು । ತಿರೆ ಕಂಡು ಪಾರ್ಥನತಿ । ಹರುಷಪಡೆದೆಂದ ॥ ೨ ॥ ರಥವ ತಿರುಹೆಂದು ಸಾ । ರಥಿಗೆ ನೇಮಿಸಲಮರ । ವಿತತಿ ತಿರುಗಿತು ನಗರ । ಕತುಳ ರಭಸದಲಿ ॥ ೩ ॥ ಕೇಳುತೀ ವಾರ್ತೆಯನು । ಕಾಲಕೇಯರೆನಿಪ್ಪ । ಖೂಳ ರಡಗಟ್ಟಿದರು । ಬಾಳ ಝುಳಪಿಸುತ ॥ ೪ ॥

ಭೋಗಷಟ್ಪದಿ

ಎಲವೊ ನಿಲ್ ನಿವಾತಕವಚ । ರಳವ ಮುರಿದೆನೆಂಬ ಗರ್ವ । ದೊಳಗೆ ಪೋಗಬೇಡ ನಿನ್ನ ತಲೆಯನವನಿಗೆ ॥ ಇಳುಹೆದಿರ್ದಡಾವು ದೈತ್ಯ । ಕುಲದೊ ಳುದಿಸಿದವರೆ ನಮ್ಮ । ಬಲುಹ ನೋಡೆನುತ್ತ ಸರಳಮಳೆಯ ಕರೆವುತ ॥ ೧ ॥ ಬರುವ ಬಾಣಗಳನು ತರಿದು । ನರನು ತೋಷದಿಂದ ಸರಳು । ಗರೆದನವನಿ ಯಭ್ರವೆಲ್ಲ ಶರದ ಮಯದಲಿ ॥ ತೆರಪುಗಾಣದಂದವಾಗೆ । ಕೆರಳಿ ಮತ್ತೆ ದನುಜರಧಿಕ । ತೆರದ ಮಾಯೆಯಿಂದ ಕಾದಿದರು ಸಗರ್ವದಿ ॥ ೨ ॥ ಪಲವು ತೆರದ ಮಾಯೆಗಳಲಿ । ಕಲಹಕೊದಗುವವರ ಕಂಡು । ತಳುವದವರ ಮಾಯೆಗಳನು ನಿಲಿಸಿ ನಿಮಿಷಕೆ ॥ ಮುಳಿದು ಮತ್ತೆ ಬ್ರಹ್ಮಶರದಿ । ಖಳರ ಗೋಣನರಿದು ಮುಗುಳೆ । ಯುಳಿದ ಬಲವನೈಂದ್ರಶರದಿ ತಲೆಯ ಕಡಿದನು ॥ ॥ ೩ ॥ ಅರಸ ಪೇಳ್ವೆನೇನ ಖಳರ । ಮರಣವನ್ನು ಕಂಡು ಮುದದಿ । ಚರರು ಮುಂದೆ ಪಾಯ್ದರಮರವರನಿಗರುಹಲು ॥ ಎರಗುತೆಂದರೊಡೆಯ ವಸಗೆ । ವರೆಯ ಹೊಯ್ಸು ಗೆಲಿದ ನಿನ್ನ । ತರುಣ ದೈತ್ಯರೋಳಿಸಹಿತ ಮರಣವಡೆ ದರು ॥ ೪ ॥

ಭಾಮಿನಿ

ಎನುತ ಕೇಳುತಲಂಗಚಿತ್ತವ । ನನಿಬರಿಂಗೊಲಿದಿತ್ತು ಹರುಷದಿ । ಮನದಲುಬ್ಬಿದನೇನನೆಂಬೆನು ಸುರಪನುತ್ಸವವ ॥ ವನಿತೆಯರ ಬರಹೇಳು ದುಂದುಭಿ । ನಿನದವಾಗಲಿ ಬರಲಿ ದಿಗಧಿಪ । ರೆನುತ ಪಾರ್ಥನನಿದಿರುಗೊಂಬರ್ತಿಯಲಿ ಪೊರವಂಟ ॥ ೧ ॥

ರಾಗ ರೇಗುಪ್ತಿ ತ್ರಿವುಡೆತಾಳ

ಸುರಪನೀಪರಿಯಿಂದ ಸಂತಸ । ವೆರಸಿ ದಿಗಧಿಪರೊಡನೆ ಮಿಗೆ ಭೋ । ರ್ಗರೆವ ವಾದ್ಯಸುಘೋಷದಲಿ ಸುರು । ಚಿರದ ಕನ್ನಡಿ ಕಲಶವಿಡಿದ । ಯ್ತರುವ ನಾರಿಯರಿಂದ ಗಂಧ । ರ್ವರ ಸುಗಾನದಿ ಪಾಠಕರ ಪರಿ । ಪರಿಯ ಪೊಗಳಿಕೆ ಯಿಂದಲಪ್ಸರ । ತರುಣಿಯರ ನರ್ತನವ ನೋಡುತ । ಬಂದನಾಗ । ನಗುತ । ಯ್ತಂದನಾಗ ॥ ೧ ॥

ವಾರ್ಧಿಕ

ಇಂತು ನಡೆತಪ್ಪ ಸುರಕಾಂತನಂ ದೂರದೊಳ್ । ಕುಂತೀಕುಮಾರಕಂ ಕಂಡು ಭಕ್ತಿಯೊಳೆ ರಥ । ದಿಂ ತಳುವದಿಳಿದೊಯ್ಯನಯ್ತಂದು ತತ್ಪದಕೆ ಸಾಷ್ಟಾಂಗದಿಂದೆರಗಲು ॥ ದಂತೀಂದ್ರಯಾನನತ್ಯಂತ ಹರುಷದೊಳಣುಗ ।

Scanned by CamScanner

ನಂ ತೆಗೆದು ತಕ್ಕವಿಸಿ ಮುಂಡಾಡಿ ಮುದ್ದಿಸುತ । ಅಂತರಂಗಸ್ನೇಹದಿಂದಲಧಿಕಾನಂದಬಾಷ್ಪಲೋಚನನಾದನು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಹರುಷದಿ ಹಿಗ್ಗುತ ಸುರಪನೀಪರಿಯಲ್ಲಿ । ನರನನು ಕೊಂಡಾಡುತ । ಮರಳಿ ತಕ್ಕಯಿಸಿ ಸಾಸಿರಮೊಗದಹಿಪನ । ತೆರದಿಂದ ಪೊಗಳುತಲಿ ॥ ೧ ॥ ಕರೆದು ಮಾತಲಿಯನ್ನು ರಥವೇರ್ದು ಸುತಸಹಿ । ತುರುತರ ಸಂಭ್ರಮದಿ ॥ ಸುರರೊಡವೆರಸಿ ದುಂದುಭಿಘೋಷದಿಂದಲಂ । ದರಮನೆಗಯ್ತಂದನು ॥ ೨ ॥ ವಾರನಾರಿಯರ ನರ್ತನವ ನೋಡುತಲಿ ಗ । ಭೀರ ಭೇರಿಯ ರವದಿ ॥ ನಾರದ ನುಡಿಪ ವೀಣೆಯನಾಲಿಸುತ ಬಂದ । ಭೂರಿನೇತ್ರನು ಅಂದದಿ ॥ ೩ ॥ ವನಿತೆಯರಾರತಿಗಳ ತರಲೆನ್ನುತ । ತನುಜನ ಕರವಿಡಿದು ॥ ವಿನಯದಿ ಕರವಿಡಿದಯ್ತಂದನರಮನೆ । ಗನಿಮಿಷರೊಡನಿಂದ್ರನು ॥ ೪ ॥ ಘೋರ ದಾನವರ ಸಂಹಾರವ ಮಾಡಿ ವೃಂ । ದಾರಕರನು ಪೊರೆದ ॥ ವೀರಾಧಿವೀರ ಪಾರ್ಥನೆ ಜಯವೆನ್ನುತ । ಲಾರತಿ ಬೆಳಗಿದರು ॥ ೫ ॥

ಭಾಮಿನಿ

ಸುರಸತಿಯರೀತೆರದಿ ವರ ಸುರು । ಚಿರದ ರತುನಾರತಿಯ ಬೆಳಗಲು । ಸುರಪನರಸಿಯು ಬಂದು ಮುತ್ತಿನ ಸೇಸೆಯನು ತಳಿದು ॥ ನರನ ಕೊಂಡಾಡುತ್ತ ದಿವಿಜರ । ಪರಿಭವಿಸಿದಸುರರನು ಗೆಲಿದ್ದೈ । ತರುಣ ನೀನಾದುದಕೆ ಫಲವಾಯ್ತೆಂದಳಿಂದುಮುಖಿ ॥ ೧ ॥

ರಾಗ ಕಾಂಭೋಜ ಝಂಪೆತಾಳ

ಇಂತೆಂದ ಶಚಿಯಂಘ್ರಿಗೆರಗಿ ನಿಮ್ಮಯ ಪುಣ್ಯ । ದಿಂ ತರಿದೆನೌ ಖಳೋತ್ತಮರ ॥ ಅಂತರಾತ್ಮಕನ ಕೃಪೆಯಿಂದ ಜಯವಾಯ್ತೆಂದು । ಕುಂತಿಯಾತ್ಮಜ ನುಡಿದನಾಗ ॥ ೧ ॥ ಬಳಿಕ ಸುರಪನು ನರನ ಮನ್ನಿಸುತಲೆಂದನೆಮ । ಗಳವಡದ ದೈತ್ಯರಟ್ಟುಳಿಯ ॥ ನಿಲಿಸಿದ್ದೈ ನಿನಗಿನ್ನು ಸರಿಯಾರು ಮೂಲೋಕ । ದೊಳಗೆನುತಲಪ್ಪಿದನು ಮಗುಳೆ ॥ ೨ ॥ ಸುರರೆಲ್ಲ ಪಾರ್ಥನನು ಶರಧಿಘೋಷದಿ ಪೊಗಳು । ತಿರೆ ಕಾಣುತಿಂದ್ರನತಿ ಮುದದಿ ॥ ಪರಿಪರಿಯಲುಪಚರಿಸುತಿರಲಯ್ದು ದಿನ ಸಂದು । ದಿರದೆ ಸ್ವರ್ಗದಲಿ ಸಂಭ್ರಮದಿ ॥ ೩ ॥

ಭಾಮಿನಿ

ಧರಣಿಪತಿ ಕೇಳಿಂತು ಪಾರ್ಥನು । ಸುರಪಭವನದಲಯ್ದು ದಿನವಿರೆ । ಧರೆಗೆ ವತ್ಸರವಾಯಿತಯ್ದುವನರಿತು ಮನದೊಳಗೆ ॥ ಮರುಗದಿರನಗ್ರಜನು

ತಾ ಮ । ದ್ವಿರಹಕೆನುತಾ ನರನು ಚಿಂತಿಸು । ತಿರದೆ ಪಿತನಡಿದಾವರೆಗೆ ತಲೆವಾಗುತಿಂತೆಂದ ॥ ೧ ॥

ರಾಗ ಶಂಕರಾಭರಣ ತ್ರಿವುಡೆತಾಳ

ಜೀಯ ಲಾಲಿಸು ಬಂದು ಬಹುದಿನ । ವಾಯಿತಿನ್ನಡವಿಯಲಿ ಚಿಂತಿಪ । ರಾಯುಧಿಷ್ಠಿರ ವಾಯುಸುತ ಮಾ । ದ್ರೇಯರೆನ್ನ ॥ ೧ ॥ ಕಳುಹು ತನ್ನನು ಧರಣಿಗೆಂದಡಿ । ಗಳಿಗೆ ಮಣಿದಿಹ ಮಗನ ಮನ್ನಿಸಿ । ನಲವಿನಿಂದಮರೇಂದ್ರನಾ ಮಾ । ತಳಿಯ ಕರೆದು ॥ ೨ ॥ ರಥವ ತಾ ತಡವೇತಕೀಪುರ । ಮಥನಭಜಕ ಸುಧರ್ಮಸುತನಿಹ । ಪೃಥಿವಿಗೊಡಗೊಂಡಯ್ದಿ ಘುತ್ತೀ । ಕಥೆಯನೆಲ್ಲ ॥ ೩ ॥ ಧರ್ಮಜನಿಗಿದನರುಪಿ ತಡೆದನು । ನಮ್ಮ ದೆಸೆಯಿಂದೀತನೆಂಬೀ । ವರ್ಮವನು ನೆರೆ ತಿಳುಪಿ ಬಾರೆನೆ । ಸಮ್ಮುದದಲಿ ॥ ೪ ॥

ವಾರ್ಧಿಕ

ಸುರಸೂತನಾಕ್ಷಣಕೆ ಸುರಪತಿಯ ನೇಮದಿಂ । ಹರಿವೇಗದಿಂದೆಸೆವ ಹರಿಗಳಂ ಮೇಳಯ್ಸಿ । ಸುರುಚಿರದ ಕನಕಭಾಸುರಮಣಿವರೂಥಮಂ ತರೆ ಕಾಣುತಾ ಪಾರ್ಥನು ॥ ಪುರುಹೂತನಿಂಗೆರಗಿ ಪುರುಷಾರ್ಥಕನುವಪ್ಪ । ಪರಿಪರಿಯ ಶುಭವಾದ ಪರಕೆವಡೆದಾ ರಥದ । ತುರಗತತಿಗಭಿನಮಿಸುರುತರಾನಂದದಿಂದಾ ವರೂಥವನೇರ್ದನು ॥ ೧ ॥

ದ್ವಿಪದಿ

ನರನಾಥನಾಲಿಸಾ ನರನು ಹರುಷದಲಿ । ತರಣಿಶತಕೋಟಿಭಾಸುರ ವರೂಥದಲಿ ॥ ೧ ॥ ಸುರರ ಸಾರಥಿಯೊಡನೆ ಗಗನಮಾರ್ಗದಲಿ । ಬರುತಿರ್ದನಗ್ರಜನ ನೋಳ್ಪ ತವಕದಲಿ ॥ ೨ ॥ ಇತ್ತ ಧರ್ಮಜನು ವಿಪ್ರೋತ್ತಮರು ಸಹಿತ । ಕೃತ್ತಿವಾಸನ ಪದಾಂಬುಜವ ಧ್ಯಾನಿಸುತ ॥ ೩ ॥ ವನದೊಳಗೆ ಚರಿಸುತಿರಲೊಂದುದಿನ ಮನದಿ । ಅನುಜ ಪಾರ್ಥನ ನೆನೆದು ವಿಗತ ಸಂತಸದಿ ॥ ೪ ॥ ಭೀಮಸೇನನ ಕರೆದು ಬಿಸುಸುಯ್ದುತಂದು । ಭೂಮಿಪಾಲಕನೆಂದ ಮನದಲುರೆ ನೊಂದು ॥ ೫ ॥

ರಾಗ ನೀಲಾಂಬರಿ ವಿಳಂಬ ಅಷ್ಟತಾಳ

ಸಹಜಾತ ಕೇಳರ್ಜುನನೇತಕೆ । ಬಹು ವಾಸರ ತಡೆದ ಸ್ವರ್ಗದಲಿ ॥ ಮಹದುತ್ಸವದಲ್ಲ್ಯಮರೇಂದ್ರನ । ಸಹವಾಸದಿ ಮರೆತನೆಮ್ಮುವನು ॥ ೧ ॥ ಸುರಲೋಕದಿ ಸುಖದೊಳಿಹನುಯೆನು । ತರುಹಿದನೆನ್ನೊಡನೆ ಸುದಾಮ ॥ ನರನೇತಕೆ ದಿನವಿಷ್ಟು ಸಂದರು । ಬರನಿಲ್ಲಿಗೆ ಏನಯ್ಯ ತಮ್ಮ ॥ ೨ ॥ ವನ

ವಾಸದಾಯಸಕೆ ಬೇಸರ್ತನೊ । ತನುವಿನಲೇನೂ ಸುಖವಿಲ್ಲದಿಹನೊ ॥ ಅನುಜನ ಕಾಣದೆ ಒಂದರೆ । ದಿನವೆಂಬುದು ಯುಗವಾಯಿತಯ್ಯೊ ॥ ೩ ॥

ಭಾಮಿನಿ

ಧರೆಯನಾಳ್ವುದನುಳಿದು ವಿಪಿನಾಂ । ತರಕೆ ಸಂದೆವದಲ್ಲದನುಜನ । ವಿರಹದಲಿ ಬೆಂಡಾದೆನಕಟೆನ್ನಂತೆ ಲೋಕದಲಿ ॥ ಪರಮ ದುಃಖಿಗಳಾರೆನುತ ನೃಪ । ಮರುಗುತಿರೆ ಕೇಳಿಸಿತು ನಭದಿಂ । ದಿರದೆ ಮಾತಳಿಯಬ್ಬರಣೆ ಧರ್ಮಜನ ಕಿವಿಗಳಿಗೆ ॥ ೧ ॥

ವಾರ್ಧಿಕ

ತಮ್ಮ ನೋಡಭ್ರದಿಂದತಿ ರವಂ ಕೇಳುತಿದೆ । ಸುಮ್ಮನಲ್ಲಿದುವೆ ನೋಡುವ ಬಾರೆನುತ್ತಲುರೆ । ದುಮ್ಮಾನವಂ ಬಿಟ್ಟು ಮರುತಜಂ ಸಹಿತಲಾ ಧರ್ಮಜಂ ನೋಡುತಿರಲು ॥ ಸುಮ್ಮಾನದಿಂ ಸುರರ ಸೂತರ ಪೊಗಳ್ಕೆಯಿಂ । ಚಮ್ಮಟಿಕೆ ವಿಡಿದ ಮಾತಲಿಯ ಗರ್ಜನೆಗಳಿಂ । ದಂ ಮಹಿಗೆ ಬಂದನರ್ಜುನನಿಂದ್ರರಥದೊಳಿನ್ನೇನೆಂಬೆನುತ್ಸಹವನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರಸ ಕೇಳಿತ್ತಲು ಯುಧಿಷ್ಠಿರ । ನರಪತಿಯು ಸೋದರರು ಸಹಿತಲೆ । ಬೆರಗಿನಿಂದೀಕ್ಷಿಸುತಲಿರಲಾ । ನರನು ಭರದಿ ॥ ೧ ॥ ಸುರವರೂಥವನಿಳಿದು ಮಾತಲಿ । ವೆರಸಿ ಬಹು ಭಕ್ತಿಯಲಿ ನಡೆತಂ । ದೆರಗಿದನು ಸಾಷ್ಟಾಂಗದಿಂ ನೃಪ । ವರನ ಪದಕೆ ॥ ೨ ॥ ಎರಗಿದನುಜನ ಕಂಡು ಸಂತಸ । ಭರದೊಳೋಲಾಡುತ್ತ ನೃಪ ಮುಂ । ಬರಿವ ಮೋಹದಲೆತ್ತಿದನು ಕರ । ವೆರಡರಿಂದ ॥ ॥ ೩ ॥ ತೆಗೆದು ಬಿಗಿದಪ್ಪಿದನು ಕಂಗಳೊ । ಳೊಗೆವ ಬಾಷ್ಪಕಣಾಳಿಯುಲಿಮೆ । ಯ್ದೆಗೆಯಲರಿಯದೆ ಮಗುಳೆ ಮಗುಳತಿ । ಸೊಗಸಿನಿಂದ ॥ ೪ ॥ ಮರುತಸುತನಿಗೆ ಮಣಿದು ಮಾದ್ರೀ । ವರಕುಮಾರರನಪ್ಪಿ ಮುದ್ದಿಪ । ನರನ ನೀಕ್ಷಿಸುತವನಿಪತಿಯತಿ ! ಕರುಣದಿಂದ ॥ ೫ ॥ ಬಂದೆಯಾ ಮತ್ಕೀರ್ತಿವಾರಿಧಿ । ಇಂದು ನೀ ಬಾರೆಮ್ಮ ಭಾಗ್ಯದ । ಕಂಧರವೆ ಬಾರೆನುತ ಮುದ್ದಿಸು । ತಂದದಿಂದ ॥ ೬ ॥ ಮಾತಳಿಯು ನೃಪವರನು ಘನಸಂ । ಪ್ರೀತಿಯಲಿ ಕುಳ್ಳಿರಿಸಿ ತನ್ನನು । ಜಾತನನು ಬೆಸಗೊಂಡನಾ ಯಮ । ಜಾತನೊಲಿದು ॥ ೭ ॥

ರಾಗ ಕಾಂಭೋಜ ಝಂಪೆತಾಳ

ಏನಯ್ಯ ತಮ್ಮ ಬಲು ದಿನವಾಯ್ತು ಪೋಗಿ ತಡ । ವೇನು ಕಾರಣವಾದುದಿನಿತು ॥ ನೀನುಸಿರೆನಲ್ಕೆ ತಲೆವಾಗಿ ನರನಗ್ರಜಗೆ । ಸಾನುರಾಗದಿ

ನುಡಿದನಾಗ ॥ ೧ ॥ ಜೀಯ ನಿನ್ನಪ್ಪಣೆಯೊಳಾಂ ಪೋಗಿ ತಪವಿರ್ದೆ । ನಾ ಇಂದ್ರಕೀಲವನದೊಳಗೆ ॥ ಮಾಯೆಯಲಿ ಬಂದ ಭವನೆನ್ನೊಳೆಚ್ಚಾಡಿ ಬಲು । ನೋಯಿಸಿದನಿರದೆ ಕಪಟದಲಿ ॥ ೨ ॥ ಕಡೆಗೆ ಮೆಚ್ಚಿದು ಕೊಟ್ಟನಸ್ತ್ರವನು ತನಗದರ । ತೊಡುವ ಬಿಡುವಂದವನು ತಿಳುಪಿ ॥ ನಡೆದನಂತರ್ಧಾನಕಿತ್ತಅಮರೇಂದ್ರ ಸುರ । ರೊಡಗೊಂಡು ಬಂದನಾಯೆಡೆಗೆ ॥ ೩ ॥ ಮುಂದಣ ಕಥಾಂತರವ ಮಾತಲಿಯೊಡನೆ ಕೇಳ್ವು । ದೆಂದು ತಲೆಗುತ್ತಿ ಕೈಮುಗಿದು ॥ ನಿಂದನುಜನಂ ಮನ್ನಿಸುತ ಮಾತಳಿಯ ಮೊಗವ । ನಂದು ನೃಪ ನೋಡಲಪನುಸಿರ್ದ ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ಅರಸ ಧರ್ಮಜ ಕೇಳು ಸುರಪನಪ್ಪಣೆಯಿಂದ । ಕರೆದೊಯ್ದೆ ನಾ ಪಾರ್ಥನ ॥ ಸುರಲೋಕದಲಿ ಬಂದುದೀತಗೂರ್ವಶಿಯೆಂಬ । ತರುಣಿಯ ಶಾಪವಲ್ಲಿ ॥ ೧ ॥ ಅಮರರಿಂಗಸದಳವಾದ ದೈತ್ಯರನೆಲ್ಲ । ಸಮರದಿ ಸೀಳಿದನು ॥ ಸುಮನಸರಿಗೆ ಸ್ವಸ್ಥವಾಯಿತೀತನ ಪರಾ । ಕ್ರಮಕೆಣೆಗಾಣೆನಯ್ಯ ॥ ೨ ॥ ವೀರಾಧಿವೀರನರ್ಜುನನೆಂದು ಡಂಗುರ । ಸಾರಿದರಮರರಲಿ ॥ ಮೂರುಲೋಕದ ಗಂಡನೆನಿಸಿದನಿವನಿಗಿ । ನ್ನಾರುಂಟು ಸರಿ ಲೋಕದಿ ॥ ೩ ॥ ನಮಗಾಗಿ ತಡೆದನೆಂಬೀ ವಿವರವನೆಲ್ಲ । ಯಮಜನಿಗರುಪಿ ನೀನು ॥ ಮಮತೆಯಿಂ ಪಾರ್ಥನ ಕಳುಪಿ ಬಾರೆನುತೆನ್ನ । ನಮರೇಂದ್ರ ಬೀಳ್ಕೊಟ್ಟನು ॥ ೪ ॥

ಭಾಮಿನಿ

ಎಂದು ಮಾತಲಿ ಸುರಪನೆಂದುದ । ನಂದವಿಟ್ಟೊರೆದರಸಗೆರಗಿದು । ಬಂದನಾ ಪಾರ್ಥನನು ಬೀಳ್ಕೊಂಡಮರಪುರವರಕೆ ॥ ಮುಂದುವರಿದತಿ ತೋಷದಲಿ ನೃಪ । ನಂದು ನರನನು ಮುದ್ದಿಸುತಲಾ । ನಂದರಸದಲಿ ಮುಳುಗಿದರು ಭೀಮಾದಿಗಳು ಸಹಿತ ॥ ೧ ॥

ವಾರ್ಧಿಕ

ಅರಸ ಕೇಳರ್ಜುನಂ ಪಾಶುಪತಶರವನುಂ । ಕರುಣದಿಂ ಪಡೆದನೀಶನೊಳಿನ್ನು ಹರಿಯ ಭ । ಕ್ತರಿಗಸಾಧ್ಯಮದಾವುದೆಂದು ವೈಶಂಪಾಯನುಂ ಪರೀಕ್ಷಿತಜಾತಗೆ ॥ ಅರುಹಿದೀ ಕಥನಮಂ ಪೇಳ್ದೆ ನಾನಜಪುರೇ । ಶ್ವರನ ಕೃಪೆಯಿಂದಿದಂ ಪೇಳಿ ಕೇಳುವ ಜನರ । ದುರಿತಮಂ ಪರಿಹರಿಸಿ ಇಷ್ಟಾರ್ಥ ವರವೀವನಾ ಮಹಾಲಿಂಗೇಶನು ॥ ೧ ॥

ಕಂದ

ದ್ವಿಜಕುಲಜಾತಂ ರಾಮಾ । ತ್ಮಜ ವಿಷ್ಣು ವೆನಿಪ್ಪ ನಜಪುರೇಶನ ಭಜಕಂ ॥ ಸೃಜಿಸಿದ ಕಾವ್ಯವನಾಲಿಸಿ । ಸುಜನರ್ ಮುದವೆತ್ತು ಮೆರೆಸವೇಳ್ಕುಂ ಧರೆಯೊಳ್ ॥ ೧ ॥ ಅಜವಿನುತಂ ಸುಜನನುತಂ । ಭುಜಗಾಭರಣಂ ಸುರೇಶ ವಂದಿತ ಚರಣಂ ॥ ಅಜಪುರವಾಸಂ ಈಶಂ । ಗಜಚರ್ಮಾಂಬರನೆ ಹರನೆ ರಕ್ಷಿಸುಗೆಮ್ಮಂ ॥ ೨ ॥

ಮಂಗಲ

ರಾಗ ಸೌರಾಷ್ಟ್ರ ಏಕತಾಳ

ಗಿರಿಜಾಧವನಿಗೆ ಮಂಗಳ । ಚೆಲ್ವ । ಉರಗಾಭರಣಗೆ ಮಂಗಳ ॥ ಪ ॥ ಆದಿಮಧ್ಯಾಂತರಹಿತನಿಗೆ ಮಂಗಳ । ವೇದಾಂತವೇದ್ಯಗೆ ಮಂಗಳ ॥ ಸಾಧು ರಕ್ಷಕಗೆ ಸರ್ವೇಶಗೆ ಮಂಗಳ । ಮಾಧವಮಿತ್ರಗೆ ಮಂಗಳ ॥ ಗಿರಿಜಾಧವ ॥ ॥ ೧ ॥ ಸುರಚಿರರತ್ನ ವಿಭೂಷಗೆ ಮಂಗಳ । ಸುರಪತಿವಂದ್ಯಗೆ ಮಂಗಳ ॥ ನರಗೊಲಿದಸ್ತ್ರವನಿತ್ತಗೆ ಮಂಗಳ । ಪರಮೇಶ್ವರನಿಗೆ ಮಂಗಳ ॥ ಗಿರಿಜಾಧವ ॥ ॥ ೨ ॥ ಗಜಚರ್ಮಾಂಬರಧರನಿಗೆ ಮಂಗಳ । ತ್ರಿಜಗತ್ಪಾಲಗೆ ಮಂಗಳ ॥ ಭಜಕರ ಭವಭಯನಾಶಗೆ ಮಂಗಳ । ಅಜಪುರವಾಸಗೆ ಮಂಗಳ ॥ ಗಿರಿಜಾಧವ ॥ ೩ ॥

ಯಕ್ಷಗಾನ ಇಂದ್ರಕೀಲಕ ಮುಗಿದುದು

॥ ಶ್ರೀಕೃಷ್ಣಾರ್ಪಣಮಸ್ತು ॥

ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು.
ಶಾ. ಶಕ ೧೮೭೪. ೧,೦೦೦–8–1951

Scanned by CamScanner